**10ನೇ ತರಗತಿ – ಪ್ರಥಮ ಭಾಷೆ – ಕನ್ನಡ**
**ಮಾದರಿ ಪ್ರಶ್ನೆ ಪತ್ರಿಕೆ – 1 (ಉತ್ತರ ಸಹಿತ)**

**ಸಮಯ : 3.15ಗಂ.** **ಅಂಕಗಳು : 100**

**ಬಹು ಆಯ್ಕೆ ಪ್ರಶ್ನೆಗಳು** **6x1=6**

1. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅಂತಹ ವಾಕ್ಯವು–
(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ (ಸಿ) ನಿಷೇಧ ವಾಕ್ಯ (ಡಿ) ಮಿಶ್ರವಾಕ್ಯ
**ಉತ್ತರ : (ಬಿ) ಸಂಯೋಜಿತ ವಾಕ್ಯ**

2. 'ಸಂಪ್ರದಾನ' ಕಾರಕಾರ್ಥವು ಈ ವಿಭಕ್ತಿಯದ್ದಾಗಿದೆ.
(ಎ) ಪ್ರಥಮಾ (ಬಿ) ತೃತೀಯಾ (ಸಿ) ಚತುರ್ಥೀ (ಡಿ) ಸಪ್ತಮೀ
**ಉತ್ತರ : (ಸಿ) ಚತುರ್ಥೀ**

3. ಕ್ರಿಯಾಪದದ ಸ್ಥಾನದಲ್ಲಿದ್ದು, ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯವನ್ನು ಹೀಗೆನ್ನುವರು.
(ಎ) ಸಾಮಾನ್ಯಾವ್ಯಯ (ಬಿ) ಅನುಕರಣಾವ್ಯಯ (ಸಿ) ಭಾವಸೂಚಕಾವ್ಯಯ (ಡಿ) ಕ್ರಿಯಾರ್ಥಕಾವ್ಯಯ
**ಉತ್ತರ : (ಡಿ) ಕ್ರಿಯಾರ್ಥಕಾವ್ಯಯ**

4. 'ಮಹೇಶ' ಪದವು ಈ ಸಂಧಿಗೆ ಉದಾಹರಣೆ :
(ಎ) ವೃದ್ಧಿ ಸಂಧಿ (ಬಿ)ಯಣ್ ಸಂಧಿ (ಸಿ) ಗುಣ ಸಂಧಿ (ಡಿ) ಸವರ್ಣದೀರ್ಘಸಂಧಿ
**ಉತ್ತರ : (ಸಿ) ಗುಣ ಸಂದಿ**

5. 'ಮುಕ್ಕಣ' ಪದವು ಈ ಸಮಾಸಕ್ಕೆ ಉದಾಹರಣೆ:
(ಎ) ಕರ್ಮಧಾರಯ (ಬಿ) ತತ್ಪುರುಷ (ಸಿ) ಅಂಶಿ ಸಮಾಸ (ಡಿ) ಬಹುವ್ರೀಹಿ ಸಮಾಸ
**ಉತ್ತರ : (ಡಿ) ಬಹುವ್ರೀಹಿ ಸಮಾಸ**

6. ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ.
(ಎ) ಪ್ರಶ್ನಾರ್ಥಕ (ಬಿ) ಉದ್ಧರಣ (ಸಿ) ಆವರಣ (ಡಿ) ವಿವರಣಾತ್ಮಕ
**ಉತ್ತರ : (ಸಿ) ಆವರಣ**

**ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4x1=4**

7. ಆ ಈ ಊ : ದೀರ್ಘ ಸ್ವರ :: ಅ ಇ ಉ ಋ : ______ ಹ್ರಸ್ವಸ್ವರ
8. ಇಷ್ಟು : ಪರಿಮಾಣ ವಾಚಕ :: ಹದಿನೈದು : __ ಸಂಖ್ಯಾವಾಚಕ
9. ಕಬ್ಬ : ಕಾವ್ಯ :: ಬೇಹಾರಿ : ______ ವ್ಯಾಪಾರಿ
10. ತನುಜ : ಮಗ :: ಸಖ : ______ ಗೆಳೆಯ

**ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7x1=7**

11. ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು?
ಉತ್ತರ: ನೆಲ್ಸನ್ ಮೂರ್ತಿ ಇರುವ ಸ್ಥಳದ ಹೆಸರು 'ಟ್ರಾಫಲ್ಗಾರ್ ಸ್ಕ್ವೇರ್'.

12. ಗಡಿ ಪ್ರದೇಶಗಳಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?
ಉತ್ತರ : ಗಡಿ ಪ್ರದೇಶಗಳಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮವನ್ನು ಪಾಲಿಸಲಾಗುತ್ತದೆ.

13. ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು ?
ಉತ್ತರ : ಸುಕುಮಾರ ಸ್ವಾಮಿಗೆ ಸೆಟ್ಟಿಯ ಪಟ್ಟವನ್ನು ಕಟ್ಟಲಾಯಿತು.

14. ಧರ್ಮಾಧಿಕರಣರು ವಟವೃಕ್ಷದ ಸಮೀಪ ಏಕೆ ಬಂದರು?
ಉತ್ತರ : ದುಷ್ಟಬುದ್ಧಿ ಮತ್ತು ಧರ್ಮಬುದ್ಧಿಯ ನಡುವಿನ ಜಗಳವನ್ನು ಪರಿಹರಿಸಲು, ವೃಕ್ಷಸಾಕ್ಷಿಯನ್ನು ಕೇಳಲು ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಬಂದರು.

15. ಹಕ್ಕಿಯ ಕಣ್ಣುಗಳು ಯಾವುವು?
ಉತ್ತರ : ಸೂರ್ಯಚಂದ್ರರೇ ಹಕ್ಕಿಯ ಕಣುಗ್ಗಳು.



Scanned with OKEN Scanner

16. ದಿನಪಸುತ ಎಂದರೆ ಯಾರು?

ಉತ್ತರ : ದಿನಪಸುತ ಎಂದರೆ ಕರ್ಣ.

17. ಯಾರಿಗೆ ವಸಂತ ಮುಖ ತೋರಲಿಲ್ಲ?

ಉತ್ತರ: ಕಮ್ಮಾರನಿಗೆ, ಕುಂಬಾರನಿಗೆ, ನೇಕಾರನಿಗೆ, ಕೇರಿಯ ಮಾರನಿಗೆ ವಸಂತ ಮುಖ ತೋರಲಿಲ್ಲ.

**ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10x2=20**

18. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?

ಉತ್ತರ: ರಾಮನ ಸ್ವಾಗತಕ್ಕಾಗಿ ಶಬರಿಯು ಪ್ರತಿ ದಿನವೂ ಸವಿಯಾದ ಬಗೆಬಗೆಯ ಹಣ್ಣುಗಳನ್ನು, ಸುವಾಸನೆಯಿಂದ ಕೂಡಿದ ಹೂವುಗಳನ್ನು ಸಂಗ್ರಹಿಸಿ, ವನಮಾಲೆಯನ್ನು ಸಿದ್ದಪಡಿಸಿ, ಹಾಗೂ ಮಧುಪರ್ಕವನ್ನು ಅಣಿಗೊಳಿಸಿ ಸಿದ್ಧತೆ ಮಾಡಿಕೊಂಡಿದ್ದಳು.

19. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?

ಉತ್ತರ : "ಡಾಕ್ಟರ್ ! ರೇಡಿಯೋ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗುತ್ತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸುತ್ತಿಲ್ಲವಲ್ಲ ?" ಎಂದು ವಿಮಾನದ ಪೈಲಟ್ ಹೇಳಿದನು.

20. ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು?

ಉತ್ತರ : ಲಕ್ಷದಿನಾರಗಳ ಬೆಲೆಬಾಳುವ ರತ್ನಗಂಬಳಿಗಳನ್ನು ಸುಕುಮಾರಸ್ವಾಮಿಯ ತಾಯಿಯು ಖರೀದಿಸಿದಳು. ಅವುಗಳನ್ನು ಮೂವತ್ತೆರಡು ತುಂಡುಗಳನ್ನಾಗಿ ಮಾಡಿ ಸೊಸೆಯಂದಿರಿಗೆ ಪಾದುಕೆಗಳಿಗೆ ಸಿಕ್ಕಿಸಿಕೊಳ್ಳಲು ಕೊಟ್ಟಳು. ಈ ಸಂಗತಿಯನ್ನು ತಿಳಿದು ಅರಸನು ಆಶ್ಚರ್ಯಪಟ್ಟನು.

21. ದುಷ್ಟಬುದ್ದಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?

ಉತ್ತರ : ದುಷ್ಟಬುದ್ಧಿಯು ತನ್ನ ತಂದೆಯ ಕೈ ಹಿಡಿದು, ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ "ನಿನ್ನ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲವೂ ಪರಿಹಾರವಾಗಿ, ಹಲವು ಕಾಲ ಹಸಿಯದೆ ಉಂಡು ಬಾಳುವಂತಹ ಸಂಪತ್ತನ್ನು ಗಳಿಸಬಹುದು. ನೀವು ಆ ಮರದ ಪೊಟರೆಯಲ್ಲಿ ಅಡಗಿದ್ದು, ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡು ಹೋದನೆಂದು ಹೇಳಿರಿ" ಎಂದು ಹೇಳಿದನು.

22. ಹೊಸಗಾಲದ ಹಸು ಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?

ಉತ್ತರ : ಹಕ್ಕಿಯು ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಭಾಗ್ಯಗಳಿಗೆ ಕಾರಣವಾಗಿದೆ. ಹಕ್ಕಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಹೊಸಗಾಲದ ಹಸುಮಕ್ಕಳನ್ನು ಹರಸುತ್ತಾ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂದು ಕವಿ ಬೇಂದ್ರೆ ಹೇಳಿದ್ದಾರೆ.

23. ಹಲಗಲಿಗೆ ದಂಡು ಬರಲು ಕಾರಣವೇನು?

ಉತ್ತರ : ಹಲಗಲಿಯ ಬೇಡರಾದ ಪೂಜೇರಿ ಹನುಮ, ಬ್ಯಾಡರ ಬಾಲ, ರಾಮ, ಜಡಗ ಇವರುಗಳು ಬ್ರಿಟಿಷ್ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದರು. ಈ ದಂಗೆಯನ್ನು ಹತ್ತಿಕ್ಕಲು ಬಂದ ಕಾರಕೂನನ ಕಪಾಳಕ್ಕೆ ಹೊಡೆದು ಸಿಪಾಯಿಗಳನ್ನು ಹೊಡೆದುರುಳಿಸಿದರು. ಇದರಿಂದ ಕೋಪಗೊಂಡ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಯ ಬೇಡರ ದಂಗೆಯನ್ನು ಬಗ್ಗುಬಡಿಯಲು ದಂಡನ್ನು ಕರೆಯಿಸಿದರು.

24. ಬಾಳಿನಲ್ಲಿ ತೃಪ್ತಿ ದೊರೆಯಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ?

ಉತ್ತರ: ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ನಿಮ್ಮ ದೇಶದ ಮತ್ತು ಇಡೀ ಜಗತ್ತಿನ ಕಲ್ಯಾಣ ನಿಮ್ಮ ಮೇಲೆ ನಿಂತಿದೆ ಎಂದು ಭಾವಿಸಿ ಕಾರ್ಯೋನ್ಮುಖರಾಗಿ, ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಿ, ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಿ. ಅನಂತರ ನೀವು ಎಷ್ಟೇ ಅಲ್ಪವನ್ನು ಸಾಧಿಸಿದ್ದರೂ ನೀವು ಒಂದು ಮಹಾ ಆದರ್ಶಕ್ಕಾಗಿ ಬಾಳಿ, ದುಡಿದು ಮಡಿದಿರಿ ಎಂಬ ತೃಪ್ತಿ ಇರುತ್ತದೆ ಎಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ.



Scanned with OKEN Scanner

25. ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಬರೆಯಿರಿ.

ಉತ್ತರ: ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಏನೆಂದರೆ " ಏಪ್ರಿಲ್ –13–1919 ರಂದು ಬ್ರಿಟಿಷರ ಗುಂಡುಗಳಿಗೆ ಆಹುತಿಯಾದ ಸುಮಾರು 2000 ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ " ಎಂಬುದೇ ಆಗಿದೆ.

26. ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಮರುಗಿವೆ ಏಕೆ?

ಉತ್ತರ: ಸರಳ ಬದುಕು ಆದರ್ಶವಾಗಿದ್ದ ನೆಲದಲ್ಲಿ ಆಡಂಬರ, ರಂಗು, ನಾಟಕೀಯತೆ ಸೇರಿಕೊಂಡು ಬದುಕು ಲಗಾಮಿಲ್ಲದೆ ಓಟ ಕಿತ್ತಿದೆ. ಸಂಪ್ರದಾಯ ದೇವರ ನಂಬಿಕೆಗಳಿಗಿಂತ ಹಬ್ಬಗಳು ಖರೀದಿಯ ಸವಾಲು ಒಡ್ಡಿ ಮನೆ– ಮನಗಳನ್ನು ಕಾಡುತ್ತಿವೆ. ಆಚರಣೆಯ ಶ್ರದ್ಧೆ ಮರೆಯಾಗಿ ಖರೀದಿ ವಿಜೃಂಭಿಸಿದೆ. ಅಷ್ಟೇಕೆ ರಾತ್ರಿ, ಹಗಲಾಗಿಸುವ ವಿದ್ಯುತ್ ದೀಪಾಲಂಕಾರದಲ್ಲಿ ಪರದೇಶಿ ಚೈನಾ ಬಲ್ಬ್ ಮೆರೆದಿದೆ. ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಮರುಗಿವೆ.

27. ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.

ಉತ್ತರ: ತಮಿಳು ಭಾಷೆಯನ್ನು ದ್ರಾವಿಡರ ಭಾಷೆಯೆಂದರು. ಜಾತಿ ಮತ್ತು ಲಿಂಗ ತಾರತಮ್ಯಗಳನ್ನು ವಿರೋಧಿಸಿ ಸಮಾನತೆಯ ಆಶಯವನ್ನು ಎತ್ತಿಹಿಡಿದರು. ಕೇರಳದ ವೈಕಂನಲ್ಲಿ ಅಸ್ಪೃಶ್ಯರಿಗೆ ದೇವಾಲಯದ ಪ್ರವೇಶದ ಹಕ್ಕಿನ ಹೋರಾಟದಲ್ಲಿ ಭಾಗವಹಿಸಿದ್ದರು. ಸೈದ್ಧಾಂತಿಕವಾಗಿ ರೂಪುಗೊಂಡಿದ್ದ ಬ್ರಾಹ್ಮಣೇತರ ಚಳವಳಿಯನ್ನು ಪೆರಿಯಾರ್‌ರು ಸಾಂಸ್ಕೃತಿಕ ಚಳವಳಿಯನ್ನಾಗಿ ಪರಿವರ್ತಿಸಿದರು. ಎಲ್ಲ ಬಗೆಯ ಶೋಷಣೆಗಳಿಂದ ಮುಕ್ತವಾಗಿ, ಜಾತಿ, ಲಿಂಗ ಅಸಮಾನತೆಗಳಿಂದ ಹೊರಬಂದು 'ಸರ್ವ ಧರ್ಮ ಸಹಿಷ್ಣತೆಯ' ಸಮಾಜ ರೂಪುಗೊಳ್ಳಬೇಕು ಎನ್ನುವುದೇ ಅವರ ಬದುಕಿನ, ಚಳವಳಿಯ ಧ್ಯೇಯವಾಗಿತ್ತು.

**ಕೆಳಗಿನ ಕವಿ/ಸಾಹಿತಿಗಳ ಸ್ಥಳ,ಕಾಲ,ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2x3=6**

28. ವಿ.ಕೃ.ಗೋಕಾಕ್

ವಿನಾಯಕ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ವಿ. ಕೃ. ಗೋಕಾಕರು ಕ್ರಿ.ಶ.1909 ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು. ಇವರು 'ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರತ ಸಿಂಧುರಶ್ಮಿ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸೇವೆಗೆ ಕೇಂದ್ರ ಸಾಹಿತ್ಯಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಪದ್ಮಶ್ರೀ ಪುರಸ್ಕಾರಗಳು ಲಭಿಸಿವೆ.

29. ಲಕ್ಷ್ಮೀಶ

ಲಕ್ಷ್ಮೀಶನು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರಿನವನು. ಈತನ ಕಾಲ ಕ್ರಿ. ಶ. 1550. ಈತನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇದ್ದು, ' ಜೈಮಿನಿ ಭಾರತ' ವೆಂಬ ಪ್ರಸಿದ್ಧ ಕಾವ್ಯವನ್ನು ರಚಿಸಿದ್ದಾನೆ. ಲಕ್ಷ್ಮೀಶ ಕವಿಗೆ ಉಪಮಾಲೋಲ, ಕರ್ಣಾಟ ಕವಿಚೂತವನ ಚೈತ್ರ ಎಂಬ ಬಿರುದುಗಳಿವೆ.

**ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1x3=3**

30. ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂಮಾಡಿಸ

| ಸ | ಭ | ರ | ನ | ಮ | ಯ | ಲಗು |
|---|---|---|---|---|---|---|
| ∪∪– | –∪∪ | –∪– | ∪∪∪ | ––– | ∪–– | ∪– |
| ಕೆರೆಯಂ | ಕಟ್ಟಿಸು | ಬಾವಿಯಂ | ಸವೆಸು | ದೇವಾಗಾ | ರಮಂ ಮಾ | ಡಿಸ |

**ಛಂದಸ್ಸು : ಮತ್ತೇಭವಿಕ್ರೀಡಿತ ವೃತ್ತ**

**ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. 1x3=3**

31. "ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ"

ಅಲಂಕಾರ : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ'.

ಉಪಮೇಯ : ನೀಚರಿಗೆ ಮಾಡುವ ಉಪಕಾರ

ಉಪಮಾನ : ಹಾವಿಗೆ ಎರೆದ ಹಾಲು

ಉಪಮಾವಾಚಕ : ಅಂತೆ

ಸಮಾನಧರ್ಮ : ಲುಪ್ತ (ಪ್ರಯೋಜನವಿಲ್ಲ)

ಸಮನ್ವಯ : ಇಲ್ಲಿ ಉಪಮೇಯವಾದ ನೀಚರಿಗೆ ಮಾಡಿದ ಉಪಕಾರವನ್ನು ಉಪಮಾನವಾದ ಹಾವಿಗೆ ಎರೆದ ಹಾಲಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದುದರಿಂದ ಇದು ಉಪಮಾಲಂಕಾರ.



Scanned with OKEN Scanner

**ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1x3=3**

32. ಕೈ ಕೆಸರಾದರೆ ಬಾಯಿ ಮೊಸರು

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳಾಗಿದ್ದು, ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತುಗಾದೆಯ ಮಹತ್ವವನ್ನು ಬಹು ಸಾರುತ್ತದೆ. 'ಕೈ ಕೆಸರಾದರೆ ಬಾಯಿ ಮೊಸರು' ಎಂಬುದು ಒಂದು ಜನಪ್ರಿಯ ಗಾದೆಯಾಗಿದೆ. ಕೈ ಕೆಸರಾದರೆ ಬಾಯಿ ಮೊಸರು ಎಂಬ ಗಾದೆಯು ಕಷ್ಟಪಟ್ಟು ದುಡಿದರೆ ಸುಖ ಎಂಬರ್ಥವನ್ನು ಕೊಡುತ್ತದೆ. ಕುಳಿತು ತಿಂದರೆ ಕುಡಿಕೆ ಹೊನ್ನು ಸಾಲದು ಎಂಬ ಮಾತಿದೆ. ಜೀವನೋಪಾಯಕ್ಕಾಗಿ ಯಾವುದಾದರೂ ಒಂದು ಕೆಲಸವಿರಬೇಕು. ಕಷ್ಟಪಟ್ಟು ದುಡಿದರೆ ಜೀವನ ಸುಖವಾಗಿರುತ್ತದೆ.

**ಅಥವಾ**

ಆಳಾಗಬಲ್ಲವನು ಅರಸನಾಗಬಲ್ಲ

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳಾಗಿದ್ದು, ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತುಗಾದೆಯ ಮಹತ್ವವನ್ನು ಬಹು ಸಾರುತ್ತದೆ. 'ಆಳಾಗಬಲ್ಲವನು ಅರಸನಾಗಬಲ್ಲ' ಎಂಬುದು ಒಂದು ಜನಪ್ರಿಯ ಗಾದೆಯಾಗಿದೆ. ಕಾಯಕದ ಘನತೆಯನ್ನು ಬಡವರು ಶ್ರೀಮಂತರೆನ್ನದೆ ತಿಳಿದು ಕೊಳ್ಳಬೇಕಾಗಿರುವುದು ಅಗತ್ಯ. ತಾನು ಪುರುಷ ಗೃಹಕೃತ್ಯಗಳನ್ನು ಮಾಡುವುದು ಅವಮಾನ, ಎರಡು ಪದವಿಗಳನ್ನು ಪಡೆದಿರುವವನು, ಹಳ್ಳಿಯಲ್ಲಿ ಕೃಷಿ ಮಾಡುವುದು ಅವಮಾನ – ಎಂಬಂಥ ಧೋರಣೆ ಸರಿಯಲ್ಲ. ಸಾಮಾನ್ಯ ಮನುಷ್ಯ ತನ್ನ ದುಡಿಮೆಯ ಬಲದಿಂದ ಎತ್ತರಕ್ಕೆ ಏರಿರುವ ಉದಾಹರಣೆಗಳು ಸಾಕಷ್ಟಿವೆ. ಆಳಿನ ದುಡಿಮೆ ಸಮಸ್ಯೆ ಸ್ಥಿತಿಗತಿಗಳನ್ನು ಸ್ವತಃ ಅವರೊಂದಿಗೆ ಬೆರೆತು ಅರ್ಥಮಾಡಿಕೊಂಡರಷ್ಟೇ ಅರಸ ಅದನ್ನು ಪರಿಹರಿಸಲು ಸಾಧ್ಯ ಎಂಬ ಮಾತನ್ನು ಈ ಗಾದೆಯು ಧ್ವನಿಸುತ್ತದೆ.

**ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6x3=18**

33) "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?."

ಆಯ್ಕೆ: ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ 'ಶಬರಿ' ಗೀತನಾಟಕದಿಂದ ಆಯ್ದ 'ಶಬರಿ' ಎಂಬ ಪಾಠದಿಂದ ಆರಿಸಲಾಗಿದೆ.

ಸಂದರ್ಭ: ಈ ಮಾತನ್ನು ರಾಮನು ಶಬರಿಗೆ ಕೇಳಿದನು. ರಾಮಲಕ್ಷ್ಮಣರು ಮಾತಂಗಾಶ್ರಮವನ್ನು ಪ್ರವೇಶಿಸುವ ಸಂದರ್ಭದಲ್ಲಿ ಶಬರಿಯು "ಎಂದು ಕಾಣುವೇನೋ ರಾಮನನ್ನು ದಶರಥನ ಮಗನಂತೆ, ಸಾಧು–ಸಜ್ಜನರ ಮಿತ್ರನಂತೆ, ಗುರುಗಳು, ತಪಸ್ವಿಗಳು ಮೆಚ್ಚಿದಂತ ಸನ್ಮಂಗಳ ಮೂರ್ತಿಯನ್ನು ಎಂದು ಕಾಣುವೆನೋ" ಎಂದು ಶ್ರೀರಾಮನ ಗುಣಗಾನ ಮಾಡುತ್ತಾ ಹಾಡುತ್ತಿರುತ್ತಾಳೆ. ಇದನ್ನು ನೋಡುತ್ತಾ ನಿಂತಿದ್ದ ರಾಮ ಶಬರಿಯ ಬಳಿಗೆ ಬಂದು "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆವುದೇ?" ಎಂದು ಕೇಳಿದ ಸಂದರ್ಭವಾಗಿದೆ.

ಸ್ವಾರಸ್ಯ: ತನಗಾಗಿ ಹಂಬಲಿಸುತ್ತಿರುವ, ಗುಣಗಾನ ಮಾಡುತ್ತಿರುವ ಶಬರಿಯನ್ನು ಕುರಿತು ರಾಮನು ಏನೂ ಅರಿಯದವನಂತೆ "ತಾಯಿ ಪ್ರಯಾಣಿಕರಿಗೆ ಇಲ್ಲಿ ಆಶ್ರಯ ಸಿಗುವುದೇ?" ಎಂದು ಕೇಳುವುದು ಸ್ವಾರಸ್ಯಪೂರ್ಣವಾಗಿದೆ.

34) "ಸಂಪತ್ತು ಸಿಕ್ಕಿತು ಎಂಬ ಮಾತ್ರಕ್ಕೆ ಸುಖವುಂಟೆ."

ಆಯ್ಕೆ : ಈ ವಾಕದ್ಯವನ್ನು ಡಾ. ಬನ್ನಂಜೆ ಗೋವಿಂದಾಚಾರ್ಯ ಅವರ 'ಕಾದಂಬರಿ' ಎಂಬ ಕೃತಿಯಿಂದ ಆರಿಸಲಾಗಿರುವ 'ಶುಕನಾಸನ ಉಪದೇಶ' ಎಂಬ ಗದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ : ಲಕ್ಷ್ಮಿಯ ಚಂಚಲಗುಣವನ್ನು ವಿವರಿಸುತ್ತಾ ಸಂಪತ್ತು ಸಿಕ್ಕಿದರೆ ಸುಖ ಸಿಕ್ಕಿತೆಂದು ಹೇಳಲಾಗುವುದಿಲ್ಲ. ಅದನ್ನು ಕಾಪಾಡುವುದು ಕಷ್ಟದ ಕೆಲಸ ಎಂದು ವಿವರಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ. ಸಂಪತ್ತನ್ನು ಕಾಪಾಡುವ ಪಾಡು ಯಾರಿಗೆ ಬೇಕು ? ಎಷ್ಟು ಬಿಗಿಯಾಗಿ ಬಿಗಿದರೂ ನುಸುಳಿಕೊಳ್ಳುವಂಥ ಜಾಣತನ ಅದಕ್ಕೆ ತಿಳಿದಿದೆ. ಮಹಾವೀರರಾದ ಸಾವಿರಾರು ಸೈನಿಕರ ಕತ್ತಿಗಳ ಪಂಜರದ ನಡುವೆ ರಕ್ಷಿಸಿದ ಸಂಪತ್ತು ಕೂಡ ತನ್ನ ತಾನೆ ಕಣ್ಮರೆಯಾಗಿಬಿಡುತ್ತದೆ ಎಂದು ಅದರ ಚಂಚಲತೆಯನ್ನು ಲೇಖಕರು ವಿವರಿಸಿದ್ದಾರೆ.

ಸ್ವಾರಸ್ಯ : ಸಂಪತ್ತು ಇಲ್ಲದವರಿಗೆ ಇಲ್ಲವೆಂಬ ಚಿಂತೆಯಾದರೆ ಅದನ್ನು ಹೊಂದಿರುವವರಿಗೆ ಅದನ್ನು ಕಾಪಾಡುವುದೇ ಕಷ್ಟ. ಅದು ಯಾರಲ್ಲೂ ನಿಲ್ಲುವುದಿಲ್ಲ. ಅಂದರೆ ಸಿರಿತನ ಶಾಶ್ವತವಲ್ಲ ಎಂಬ ನೀತಿ ಇಲ್ಲಿ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ.

35) "ನಮ್ಮನಾಳ್ವರುಮೊಳರೆ ಎಂದು ವಿಸ್ಮಯಂಬಟ್ಟು"

ಆಯ್ಕೆ : ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರು 'ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ 'ಸುಕುಮಾರಸ್ವಾಮಿ ಕಥೆ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ರಾಜ ವೃಷಭಾಂಕನು ಸುಕುಮಾರಸ್ವಾಮಿಯ ಮನೆಗೆ ಬಂದು "ಸುಕುಮಾರನು ಎಲ್ಲಿದ್ದಾನೆ?" ಎಂದು ಕೇಳಿದಾಗ ಅದಕ್ಕೆ ಉತ್ತರವಾಗಿ ಯಶೋಭದ್ರೆ "ಸ್ವಾಮಿ, ಅವನು ಬಹಳ ಸಾಧು, ನೀವು ಬಂದುದನ್ನು ಅವನು ತಿಳಿದಿಲ್ಲ. ಉಪ್ಪರಿಗೆಯ ಮೇಲೆ ಇದ್ದಾನೆ" ಎಂದು ಹೇಳಿ ಸುಕುಮಾರನಲ್ಲಿಗೆ ಹೋಗಿ "ಮಗನೇ ರಾಜರು ಬಂದಿದ್ದಾರೆ ಬಾ ಹೋಗೋಣ" ಎಂದಳು.



Scanned with OKEN Scanner

ಆಗ ಸುಕುಮಾರನು "ರಾಜರೆಂದರೆ ಯಾರು ?" ಎಂದು ಕೇಳಲು ತಾಯಿಯು "ನಮ್ಮನ್ನು ಆಳುವವರು" ಎಂದು ಹೇಳಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಹೊರಗಿನ ಪ್ರಪಂಚದ ಅರಿವೇ ಇಲ್ಲದ ಸುಕುಮಾರನು ತನ್ನ ಮನೆಯೇ ಅರಮನೆ, ನಾವೇ ಆಳುವವರೆಂದು ಭಾವಿಸಿದ್ದ ಸುಕುಮಾರಸ್ವಾಮಿಯು ನಮ್ಮನ್ನು ಆಳುವವರೂ ಇದ್ದಾರೆಯೇ ಎಂದು ವಿಸ್ಮಯಪಡುವುದು ಇಲ್ಲಿ ಸ್ವಾರಸ್ಯಕರವಾಗಿದೆ.

36) "ಹೊಡೆದರೊ ಗುಂಡ ಕರುಣೆ ಇಲ್ಲದಂಗ"

ಆಯ್ಕೆ : ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಲಾವಣಿಯಿಂದ ಆರಿಸಲಾಗಿದೆ.

ಸಂದರ್ಭ : ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗು ಬಡಿಯಲು ಬ್ರಿಟಿಷರ ದಂಡು ಬಂದು, ಹಲಗಲಿಯ ಬೇಡರ ಬೆನ್ನು ಹತ್ತಿಕೊಂಡು, ಎದುರಿಗೆ ಸಿಕ್ಕ ಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು ಎಂದು ಲಾವಣಿಕಾರನು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ : ಹಲಗಲಿಯ ಬೇಡರ ಮೇಲೆ ನಿಷ್ಕರುಣೆಯಿಂದ ಗುಂಡು ಹಾರಿಸಿ ಕೊಲ್ಲುವ ಬ್ರಿಟಿಷರ ಕ್ರೌರ್ಯದ ಪರಮಾವಧಿಯನ್ನು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ.

37) "ನಿನ್ನಪದೆಸೆಯ ಬಯಸುವನಲ್ಲ"

ಆಯ್ಕೆ : ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

ಸ್ವಾರಸ್ಯ : ತನ್ನ ಜನ್ಮ ರಹಸ್ಯವನ್ನು ಅರಿತು ಕರ್ಣನು ಮನದಲ್ಲಿ ಚಿಂತಿತನಾಗಿ ಮೌನವಾದಾಗ, ಕೃಷ್ಣನು ಈ ಮಾತನ್ನು ಹೇಳುವುದರ ಮೂಲಕ ಕರ್ಣನನ್ನು ಸಮಾಧಾನಪಡಿಸಿದ್ದು ಸ್ವಾರಸ್ಯಪೂರ್ಣವಾಗಿದೆ.

38) "ವಿದ್ಯಾಧನಮೆ ಧನಮಪ್ಪುದು"

ಆಯ್ಕೆ : ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ :ದ್ರೋಣನು ತನ್ನ ಬಳಿ ಬಂದು ಸಹಾಯ ಯಾಚಿಸಿದಾಗ ಪರಶುರಾಮನು "ಎಲೈ ದ್ರೋಣನೆ ಈಗ ಇದೊಂದು ಬಿಲ್ಲು, ದಿವ್ಯಾಸ್ತ್ರಗಳ ಸಮೂಹವೂ ಇದೆ. ನನ್ನಲ್ಲಿ ಬೇರೆಯಾವುದೇ ಆಸ್ತಿಯಿಲ್ಲ. ಇವುಗಳಲ್ಲಿ ನಿನಗೆ ಯಾವುದನ್ನುಕೊಡಲಿ? ಚೆನ್ನಾಗಿ ಯೋಚಿಸಿ ಹೇಳು" ಎಂದು ಹೇಳಿದ ಸಂದರ್ಭದಲ್ಲಿ ದ್ರೋಣನು "ನನಗೆ ವಿದ್ಯಾಧನ ವೇಧನವಾಗಿರುವುದರಿಂದ ಆ ದಿವ್ಯಾಸ್ತ್ರಗಳನ್ನು ದಯಪಾಲಿಸಬೇಕು" ಎಂದು ಹೇಳುತ್ತಾನೆ.

ಸ್ವಾರಸ್ಯ : 'ವಿದ್ಯಾಧನವೇ ನಿಜವಾದ ಸಂಪತ್ತು' ಎಂದು ಹೇಳುವ ಮೂಲಕ ದ್ರೋಣನು ವಿದ್ಯೆಯ ಮಹತ್ವವನ್ನು ತಿಳಿಸಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

**ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

39. ಕಲುಷಿತವಾದೀ . . . . . . ಮುಟ್ಟೋಣ ।

ಕಲುಷಿತವಾದೀ ನದೀ ಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀಕಾಡು ಮೇಡುಗಳ
ವಸಂತವಾಗುತ ಮುಟ್ಟೋಣ

**ಅಥವಾ**

ಮತಗಳೆಲ್ಲವೂ . . . . . . ಬಿತ್ತೋಣ ।

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

**ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ. 1x4=4**

40. ನೆಲಕಿಜೆವೆನೆಂದು ಬಗೆದಿರೆ।
ಚಲಕಿಜೆವೆಂ ಪಾಂಡುಸುತರೊಳೀನೆಲನಿದು ಪಾ॥
ೞ್ಕೆಲನೆನಗೆ ದಿನಪಸುತನಂ।
ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ವಪೆನೇ॥



Scanned with OKEN Scanner

ತಂದೆತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಬಾಣಗಳ ಹಾಸಿಗೆಯಲ್ಲಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬಂದ ದುರ್ಯೋಧನನಿಗೆ ಭೀಷ್ಮರು ಸಂಧಿಯ ಮಾತನ್ನು ಹೇಳುತ್ತಾರೆ. ಆಗ ದುರ್ಯೋಧನನು ತಾತ ಭೀಷ್ಮರಿಗೆ ನಾನು ನೆಲಕ್ಕಾಗಿ ಹೊರಾಡುತ್ತಿಲ್ಲ, ಛಲಕ್ಕಾಗಿ ಹೊರಾಡಿತ್ತಿದ್ದೇನೆ. ಪಾಂಡವರೊಂದಿಗೆ ಈ ನೆಲ ಪಾಳು ನೆಲವಿದ್ದಂತೆ. ನನ್ನ ಪ್ರಿಯ ಮಿತ್ರನಾದ ಕರ್ಣನನ್ನು ಕೊಲಿಸಿದ ನೆಲದೊಂದಿಗೆ ಮತ್ತೆ ಬಾಳಲು ಸಾಧ್ಯವಿಲ್ಲವೆಂದು ದಿಟ್ಟತನದಿಂದ ಉತ್ತರಿಸುತ್ತಾನೆ. ಇಲ್ಲಿ ದುರ್ಯೋಧನನ ಛಲದಗುಣ, ಪಾಂಡವರೊಂದಿಗೆ ಯುದ್ದ ಮಾಡುತ್ತೇನೆ ಎಂಬ ದಿಟ್ಟತನ ವ್ಯಕ್ತಗೊಂಡಿದೆ.

**ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2x4=8**

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

ಉತ್ತರ : ನಾಲ್ವಡಿ ಕೃಷ್ಣರಾಜ ಒಡೆಯರು 1902 ಆಗಸ್ಟ್ 8 ರಿಂದ ಮೈಸೂರು ರಾಜ್ಯದ ನೇರ ಉಸ್ತುವಾರಿಯನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು, ದಿವಾನರಾಗಿದ್ದ ಸರ್. ಕೆ ಶೇಷಾದ್ರಿಯವರ ಸಹಕಾರದಿಂದ ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣ ಬದ್ಧರಾದರು. ಅರಸು ಮನೆತನದಿಂದ ಬಂದವರಾದರೂ, ಜನತೆ ಆಡಳಿತದಲ್ಲಿ ಪಾಲ್ಗೊಳ್ಳುವುದು ಪರವಾಗಿದ್ದರು. 'ಪ್ರಜಾಪ್ರತಿನಿಧಿ ಸಭೆ' ಹೊಸರೂಪ ಪಡೆಯಿತು. 1923ರಲ್ಲಿ ಕಾನೂನೊಂದನ್ನು ಜಾರಿಗೆ ತಂದು 'ಪ್ರಜಾಪ್ರತಿನಿಧಿ ಸಭೆ'ಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿಸಿದರು. ವರ್ಷಕ್ಕೆ ಎರಡು ಬಾರಿ ಸಮಾವೇಶಗೊಂಡು ಕಲಾಪ ನಡೆಸಿ, ವಾರ್ಷಿಕ ಆಯವ್ಯಯ, ಪರಿಶೀಲನೆ, ಪ್ರಶ್ನೋತ್ತರ, ಠರಾವು ಮಂಡಿಸಲಾಗುತ್ತಿತ್ತು. ಹೆಚ್ಚಿನ ಸದಸ್ಯರು ಜನರಿಂದಲೇ ಆಯ್ಕೆಯಾಗುತ್ತಿದ್ದರು. 1907 ರಲ್ಲಿ 'ನ್ಯಾಯ ವಿಧಾಯಕ ಸಭೆ' ಸ್ಥಾಪಿಸಿದರು. ಇದು ಮೇಲ್ಮನೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಬೆಂಗಳೂರಿನಲ್ಲಿ ಎರಡು ಬಾರಿ ಸಮಾವೇಶಗೊಂಡು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲಾವನ್ನು ವಿಮರ್ಶಿಸುವ, ಕಾನೂನುನ್ನು ಜಾರಿಗೆ ತರುವ ಅಧಿಕಾರ ಇದ್ದಿತು. ಗ್ರಾಮ ನಿರ್ಮಲೀಕರಣ, ವೈದ್ಯೆ ಸಹಾಯ, ವಿದ್ಯಾ ಪ್ರಚಾರ, ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು. ಶಿವನಸಮುದ್ರದ ಬಳಿ ಕಾವೇರಿ ನದಿಯಿಂದ ಜಲವಿದ್ಯುತ್ ಉತ್ಪಾದನಾ ಕೇಂದ್ರ, ವಾಣಿವಿಲಾಸ ಸಾಗರ, ಕೃಷ್ಣಸಾಗರ ಜಲಾಶಯಗಳನ್ನು ನಿರ್ಮಿಸಿದರು. ಉಚಿತ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಜಾರಿಗೆತಂದರು. ಮೈಸೂರು ವಿಶ್ವವಿದ್ಯಾನಿಲಯ, ಉಚಿತ ಅಸ್ಪತ್ರೆ, ಮೈಸೂರು ಬ್ಯಾಂಕ್, (ಈಗ ಎಸ್.ಬಿ ಐ) ಸಹಕಾರ ಸಂಘಗಳನ್ನು ಸ್ಥಾಪಿಸಿದರು. ಹಲವಾರು ಸಾಮಾಜಿಕ ಕಾನೂನುಗಳನ್ನು ಜಾರಿಗೆತಂದರು. ಭರತಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮಾಡಿ ಮೈಸೂರು ಸಂಸ್ಥಾನವನ್ನು 'ಮಾದರಿ ಮೈಸೂರುರಾಜ್ಯ'ವನ್ನಾಗಿ ರೂಪಿಸಿ ಸಾಮಾಜಿಕ ಕಾನೂನುಗಳ ಹರಿಕಾರ ಎಂಬ ಕೀರ್ತಿಗೆ ಪಾತ್ರರಾದರು.

**ಅಥವಾ**

ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

ಉತ್ತರ: ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸಿದರು. ದಿವಾನರಾದ ನಂತರ ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು. ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು. ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು. 1913 ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಮೈಸೂರು ಸಂಸ್ಥಾನವೇ ಪ್ರತ್ಯೇಕವಾದ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನಮೂಲಕ ರೂಪುಗೊಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಇವರ ಕಾಲದಲ್ಲಾಯಿತು. ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. 'ಕನ್ನಡ ಸಾಹಿತ್ಯ ಪರಿಷತ್ತನ್ನು' ಸ್ಥಾಪಿಸಿದ್ದು ಇವರಕಾಲದ ಮತ್ತೊಂದು ಮಹತ್ವದ ಸಾಧನೆಯಾಗಿದೆ. ವಿಶ್ವೇಶ್ವರಯ್ಯ ಅವರು ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದ್ದರು. "ಕೈಗಾರಿಕೀಕರಣ ಇಲ್ಲವೆ ಅವನತಿ" ಎಂಬ ಘೋಷಣೆ ಮಾಡಿದರು. ಇವರ ಕಾಲದಲ್ಲಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು ಸ್ಥಾಪಿತವಾಯಿತು. ಇದಲ್ಲದೆ ಹೆಂಚಿನಕಾರ್ಖಾನೆ, ಮೊಳೆ ಮತ್ತು ಗೊಬ್ಬರ ತಯಾರಿಕಾ ಸ್ಥಾವರ, ಸಕ್ಕರೆ ಕಾರ್ಖಾನೆ, ಔಷಧ ತಯಾರಿಕ ಘಟಕ, ಗಂಧದಎಣ್ಣೆ, ಬೆಂಕಿಕಡ್ಡಿ ಹಾಗೂ ಕಾಗದದ ಕಾರ್ಖಾನೆಗಳು ಸ್ಥಾಪಿತವಾದವು. ಸೋಪು ಹಾಗೂ ಲೋಹ ತಯಾರಿಕೆ, ಕಲೆ ಮತ್ತುಕರಕುಶಲ ಡಿಪೋ, ಕೃಷ್ಣರಾಜೇಂದ್ರ ಬಟ್ಟೆಗಿರಣಿ, ಕಾಗದದ ತಿರುಳು, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ಮತ್ತು ಪೀಠೋಪಕರಣಗಳ ತಯಾರಿಕಾ ಘಟಕಗಳು – ಹೀಗೆ ನೂರಾರು ಕೈಗಾರಿಕೆಗಳು ಪ್ರಾರಂಭಗೊಂಡವು. 1913 ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳನ್ನು ಸ್ಥಾಪಿಸಿದರು.. ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು. ಪ್ರಾಂತೀಯ ಸಹಕಾರಿ ಬ್ಯಾಂಕ್ ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು.

42. 'ಹಸುರು' ಕವನದ ರಿತ್ಯ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ.

ಉತ್ತರ : ನೀಲವರ್ಣದ ಸಮುದ್ರದಂತಿರುವ ವನವೆಲ್ಲವೂ ಹಸುರಾಗಿದೆ. ಕವಿಯ ಆತ್ಮಕ್ಕೂ ಕೂಡ ಹಸುರು ಆವರಿಸಿದೆ. ನವರಾತ್ರಿಯಲ್ಲಿ ಹಸುರಾದ ಕವಿಯ ಹೃದಯಕ್ಕೆ ಆಗಸವು ಹಸುರಾಗಿ ಕಾಣುತ್ತದೆ. ಆಗಸದಲ್ಲಿರುವ ಮುಗಿಲು ಹಸುರಾಗಿ



Scanned with OKEN Scanner

ಕಾಣುತ್ತಿದೆ. ಗದ್ದೆಯ ಬಯಲೆಲ್ಲ ಹಸುರಾಗಿ ಗೋಚರಿಸಿದೆ. ಮಲೆ, ಕಣಿವೆಗಳೆಲ್ಲವು ಹಸುರಾಗಿವೆ. ಸಂಜೆಯ ಬಿಸಿಲು ಕೂಡ ಕವಿಗೆ ಹಸುರು ಕಾಣುತ್ತಿದೆ. ಹೊಸ ಹೂವಿನ ಕಂಪಿಗೂ ಹಸುರಿನ ಆವರಿಸಿದೆ. ಬೀಸುವ ತಂಪಾದ ಗಾಳಿಗೂ ಹಸುರು ವ್ಯಾಪಿಸಿದೆ. ಹಕ್ಕಿಯ ಕೊರಳಿಂದ ಬರುವ ಇಂಪಾದ ಧ್ವನಿ ಹಸುರಾಗಿದೆ. ಇಳೆಯ ಉಸಿರು(ಗಾಳಿ) ಕವಿಯ ದೇಹದಲ್ಲೂ ಸಂಚರಿಸಿ ಅದಕ್ಕೂ ಕೂಡ ಹಸುರು ವ್ಯಾಪಿಸಿದೆ. ಕಡಲಿಗೂ ಹಸಿರು ವ್ಯಾಪಿಸಿದೆ. ಎತ್ತ ನೋಡಿದರತ್ತಾ ಕಣ್ಣಿಗೆ ಹಚ್ಚಹಸುರು ಕಾಣಿಸಿದೆ. ಸರ್ವವು ಹಸುರಿನ ಭಾವ ಕವಿಯ ಮನದಲ್ಲಿ ಮೂಡಿದ್ದರಿಂದ ಒಡಲಿನಲ್ಲಿರುವ ನೆತ್ತರೂ ಹಸುರಾಗಿ ಕವಿಯಾತ್ಮಕ್ಕೂ ಹಸುರು ವ್ಯಾಪಿಸಿದೆ ಎಂದು ವಿವರಿಸಬಹುದು.

**ಅಥವಾ**

ಕವಿ ಕುವೆಂಪುರವರು ಹಸುರಿನ ಸೌಂದರ್ಯಾನುಭವದಲ್ಲಿ ತನ್ಮಯತೆಯನ್ನೊಂದಿದ ರೀತಿಯನ್ನು ಬಣ್ಣಿಸಿ.

ಉತ್ತರ: ಹಸುರು ಸಕಲ ಜೀವಿಗಳ ಉಸಿರು ಇದ್ದಂತೆ. ಹಸುರು ಪ್ರಕೃತಿಯ ಸಂಭ್ರಮವನ್ನು ತೋರಿಸುತ್ತದೆ. ಹಸುರು ಸಮೃದ್ಧಿಯ ಸಂಕೇತ. ಭೂಮಿ ಹಸುರಿನಿಂದ ಕಂಗೊಳಿಸುತ್ತಿದೆ ಎಂದರೆ ಭೂಮಿ ಸಮೃದ್ಧವಾಗಿದೆ ಎಂದೇ ಅರ್ಥ. ಕವಿ ಕುವೆಂಪುರವರು ಪ್ರಕೃತಿಯನ್ನು ನೋಡಿದ ಭಾವ ಹಸುರುಮಯವಾಗಿದೆ. ಪ್ರಕೃತಿಯ ಚರಾಚರ ವಸ್ತುಗಳು ಕೂಡ ಕವಿಯ ಆತ್ಮವನ್ನು ಹಸುರು ಮಯವಾಗಿಸಿ ಇಡಿ ಪ್ರಕೃತಿಯ ಜೊತೆಗೆ ತಮ್ಮ ಆತ್ಮವನ್ನು ಹಸುರಾಗಿಸಿಕೊಂಡು ರಸಪಾಕದಲ್ಲಿ ಮಿಂದಿದ್ದಾರೆ. ಇದು ಪ್ರಕೃತಿಯೊಂದಿಗಿನ ಅದ್ವೈತ ಸ್ಥಿತಿಯನ್ನು ಎತ್ತಿ ತೋರಿಸಿದೆ. ಹಸುರಿನಿಂದ ಕೂಡಿದ ಮರಗಿಡ ಪೈರುಗಳು ಪ್ರಾಣಿ, ಪಕ್ಷಿ, ಮಾನವ ಮೊದಲಾದ ಜೀವ ಜಗತ್ತಿಗೆ ಆಹಾರ–ಆನಂದವನ್ನು ಉಂಟು ಮಾಡುತ್ತದೆ. ಹಸುರಾದ ಮಲೆ, ಕಣಿವೆ, ತೋಟಗಳು, ಭತ್ತದ ಗದ್ದೆಗಳು, ಆಗಸಗಳು ಎಲ್ಲರ ಕಣ್ಣಿಗೆ, ಮನಸ್ಸಿಗೆ ಆಹ್ಲಾದವನ್ನು ತರುವುದರ ಜೊತೆಗೆ ಜೀವವನ್ನು ತುಂಬುತ್ತವೆ. ಆದ್ದರಿಂದ ಹಸಿರು ಇಳೆಯ ಉಸಿರಾಗಿದೆ. ಜೀವಿಗಳ ಉಸಿರು ಇರಬೇಕಾದರೆ ಹಸುರು ಬಹಳ ಮುಖ್ಯ. ಆದ್ದರಿಂದ ಭೂಮಿಯ ಮೇಲಿನ ಹಸುರನ್ನು ಕಾಪಾಡುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಎಂದು ನನ್ನ ಅಬಿಪ್ರಾಯವಾಗಿದೆ.

**ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1x04 =04 (2+2)**

ದೇವರ ಗುಡ್ಡರು ಜನಪದ ಮಹಾಕಾವ್ಯಗಳಲ್ಲೊಂದಾದ ಮಲೆಯ ಮಹದೇಶ್ವರನ ಕಥೆಯನ್ನು ಪ್ರಧಾನವಾಗಿ ಹಾಡುತ್ತಾರೆ. ಇದಲ್ಲದೆ ಪಿರಿಯಾಪಟ್ಟಣದ ಕಾಳಗ, ಸಾರಂಗಧರ, ಬಿಳಿಗಿರಿ ರಂಗಸ್ವಾಮಿ, ಬೆಟ್ಟದ ಚಾಮುಂಡಿ, ಬಾಲನಾಗಮ್ಮ, ಮುಡುಕುತೊರೆ ಮಲ್ಲಪ್ಪ, ಕೋಳೂರ ಕೊಡಗೂಸು ಮೊದಲಾದ ಲೌಕಿಕ, ಧಾರ್ಮಿಕ ಹಾಗೂ ಐತಿಹಾಸಿಕ ಕಾವ್ಯಗಳನ್ನು ಹಾಡುತ್ತಾರೆ. ಮಂಟೇಸ್ವಾಮಿ ಕಾವ್ಯವನ್ನು ಅದರಲ್ಲೂ ಸಿದ್ದಪ್ಪಾಜಿಗೆ ಸಂಬಂಧಿಸಿದ ಭಾಗವನ್ನು ಕಂಸಾಳೆ ಗತ್ತಿಗೆ ಅಳವಡಿಸಿಕೊಂಡು ಹಾಡುತ್ತಾರೆ. ಬೀಸುಕಂಸಾಳೆ ದೇವರಗುಡ್ಡರ ವಿಶಿಷ್ಟ ನೃತ್ಯ. ಕರ್ನಾಟಕದ ಜನಪದ ನೃತ್ಯಗಳಲ್ಲಿ ಅಪೂರ್ವವಾದುದು. ಇದರಲ್ಲಿ ತಾರ್‌ಬಟ್ಟು, ತಟ್‌ಬಟ್ಟು ಮುಂತಾದ ಬಗೆಗಳಿವೆ. ನಾಲ್ಕು ಮಂದಿ ಗುಡ್ಡರು ಒಂದು ಕಡೆ ನಿಂತು ಲಿಂಗ ಬಾ, ಮುದ್ದುಲಿಂಗ ಬಾ, ನಮ್ಮ ಮುದ್ದು ಮಾದಯ್ಯನ ಲಿಂಗ ಬಾ ಎಂದು ಹಾಡುತ್ತಾರೆ. ಕಂಸಾಳೆ ಹಿಡಿದ ಗುಡ್ಡ ತಾಳಕ್ಕೆ ತಕ್ಕಂತೆ ವಿವಿಧ ವಿನ್ಯಾಸದಲ್ಲಿ ಬಾರಿಸುತ್ತ ಕುಣಿಯುತ್ತಾನೆ. ತಲೆಯ ಮೇಲೆ, ಬೆನ್ನ ಹಿಂದೆ, ಕಾಲ ಕೆಳಗೆ, ಕುಳಿತು, ನಿಂತು, ಬಾಗಿ, ಬಳುಕಿ ತೀವ್ರಗತಿಯಲ್ಲಿ ನರ್ತಿಸುವ ಭಂಗಿ ಆಶ್ಚರ್ಯಕರ ಹಾಗೂ ಅದ್ಭುತ. ಒಮ್ಮೊಮ್ಮೆ ಇಬ್ಬರು ಗುಡ್ಡರು ಕಲೆತು ನರ್ತಿಸುವುದುಂಟು. ಒಬ್ಬರ ಕಂಸಾಳೆಗೆ ಮತ್ತೊಬ್ಬರು ಕುಟ್ಟುತ್ತಾ ಕುಣಿಯುವ ವೈಖರಿ ಆಕರ್ಷಕವಾಗಿರುತ್ತದೆ.

**43. ಪ್ರಶ್ನೆಗಳು:**

ಅ) ದೇವರ ಗುಡ್ಡರು ಯಾವ ಯಾವ ಕಾವ್ಯಗಳನ್ನು ಹಾಡುತ್ತಾರೆ?

ದೇವರ ಗುಡ್ಡರು ಜನಪದ ಮಹಾಕಾವ್ಯಗಳಲ್ಲೊಂದಾದ ಮಲೆಯ ಮಹದೇಶ್ವರನ ಕಥೆಯನ್ನು ಪ್ರಧಾನವಾಗಿ ಹಾಡುತ್ತಾರೆ. ಇದಲ್ಲದೆ ಪಿರಿಯಾಪಟ್ಟಣದ ಕಾಳಗ, ಸಾರಂಗಧರ, ಬಿಳಿಗಿರಿ ರಂಗಸ್ವಾಮಿ, ಬೆಟ್ಟದ ಚಾಮುಂಡಿ, ಬಾಲನಾಗಮ್ಮ, ಮುಡುಕುತೊರೆ ಮಲ್ಲಪ್ಪ, ಕೋಳೂರ ಕೊಡಗೂಸು ಮೊದಲಾದ ಲೌಕಿಕ, ಧಾರ್ಮಿಕ ಹಾಗೂ ಐತಿಹಾಸಿಕ ಕಾವ್ಯಗಳನ್ನು ಹಾಡುತ್ತಾರೆ.

ಆ) ಬೀಸು ಕಂಸಾಳೆ ನೃತ್ಯವನ್ನು ಕುರಿತಾಗಿ ಬರೆಯಿರಿ.

ಬೀಸುಕಂಸಾಳೆ ದೇವರಗುಡ್ಡರ ವಿಶಿಷ್ಟ ನೃತ್ಯ. ಕರ್ನಾಟಕದ ಜನಪದ ನೃತ್ಯಗಳಲ್ಲಿ ಅಪೂರ್ವವಾದುದು. ಇದರಲ್ಲಿ ತಾರ್‌ಬಟ್ಟು, ತಟ್‌ಬಟ್ಟು ಮುಂತಾದ ಬಗೆಗಳಿವೆ. ನಾಲ್ಕು ಮಂದಿ ಗುಡ್ಡರು ಒಂದು ಕಡೆ ನಿಂತು ಲಿಂಗ ಬಾ, ಮುದ್ದುಲಿಂಗ ಬಾ, ನಮ್ಮ ಮುದ್ದು ಮಾದಯ್ಯನ ಲಿಂಗ ಬಾ ಎಂದು ಹಾಡುತ್ತಾರೆ. ಕಂಸಾಳೆ ಹಿಡಿದ ಗುಡ್ಡ ತಾಳಕ್ಕೆ ತಕ್ಕಂತೆ ವಿವಿಧ ವಿನ್ಯಾಸದಲ್ಲಿ ಬಾರಿಸುತ್ತ ಕುಣಿಯುತ್ತಾನೆ. ತಲೆಯ ಮೇಲೆ, ಬೆನ್ನ ಹಿಂದೆ, ಕಾಲ ಕೆಳಗೆ, ಕುಳಿತು, ನಿಂತು, ಬಾಗಿ, ಬಳುಕಿ ತೀವ್ರಗತಿಯಲ್ಲಿ ನರ್ತಿಸುವ ಭಂಗಿ ಆಶ್ಚರ್ಯಕರ ಹಾಗೂ ಅದ್ಭುತ. ಒಮ್ಮೊಮ್ಮೆ ಇಬ್ಬರು ಗುಡ್ಡರು ಕಲೆತು ನರ್ತಿಸುವುದುಂಟು. ಒಬ್ಬರ ಕಂಸಾಳೆಗೆ ಮತ್ತೊಬ್ಬರು ಕುಟ್ಟುತ್ತಾ ಕುಣಿಯುವ ವೈಖರಿ ಆಕರ್ಷಕವಾಗಿರುತ್ತದೆ.

**ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ, ಪತ್ರ ಬರೆಯಿರಿ. 1x5=5**

44. ನಿಮ್ಮನ್ನು ಕಲಬುರಗಿಯ ಶ್ರೀ ಶರಣಬಸವೇಶ್ವರ ಪ್ರೌಢಶಾಲೆಯ 'ಅಭಿನವ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ 'ಸಂವಿಧಾನದ ದಿನಾಚರಣೆ'ಯ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ 'ವಿಜಯವಾಣಿ' ದಿನಪತ್ರಿಕೆಯ ಸಂಪಾದಕರಿಗೆ ಒಂದು ಮನವಿ ಪತ್ರ ಬರೆಯಿರಿ.

03.02.2024
ಕಲಬುರಗಿ



Scanned with OKEN Scanner

ಇಂದ,

ಅಭಿನವ

ಶ್ರೀ ಶರಣ ಬಸವೇಶ್ವರ ಪ್ರೌಢಶಾಲೆ, ಕಲಬುರಗಿ

ಗೆ,

ಸಂಪಾದಕರು

ವಿಜಯವಾಣಿ ದಿನಪತ್ರಿಕೆ, ಕಲಬುರಗಿ

ಮಾನ್ಯರೇ,

ವಿಷಯ : ಶಾಲೆಯಲ್ಲಿ ನಡೆದ ಸಂವಿಧಾನ ದಿನಾಚರಣೆಯ ವರದಿಯನ್ನು ಪ್ರಕಟಿಸುವ ಬಗ್ಗೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಗರದ ಅತೀ ಪುರಾತನ ಶಾಲೆಯಾದ ಶ್ರೀ ಶರಣಬಸವೇಶ್ವರ ಪ್ರೌಢಶಾಲೆಯಲ್ಲಿ ದಿನಾಂಕ 26–01–2024 ರಂದು ಬಹಳ ವಿಜೃಂಭಣೆಯಿಂದ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಅಂದು ನಮ್ಮ ಶಾಲೆಗೆ ಮುಖ್ಯ ಅತಿಥಿಗಳಾಗಿ ಖ್ಯಾತ ಸಾಹಿತಿ ಶ್ರೀ ಚಂದ್ರಶೇಖರ ಕಂಬಾರರು ಬಂದಿದ್ದರು. ಅವರು ಗಣತಂತ್ರದ ಬಗ್ಗೆ ಬಹಳ ಸೊಗಸಾಗಿ ಮಾತನಾಡಿದರು. ಅಂದು ಶಾಲೆಯ ವತಿಯಿಂದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೆರವೇರಿಸಲಾಯಿತು. ವಿಶೇಷ ಅತಿಥಿಯಾಗಿ ಆಗಮಿಸಿದ ಖ್ಯಾತ ರಂಗಭೂಮಿ ಕಲಾವಿದೆಯಾದ ಶ್ರೀಮತಿ ಉಮಾಶ್ರೀಯವರು ಅಂದು ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಬಹಳವಾಗಿ ಮೆಚ್ಚಿಕೊಂಡರು. ಅಂದು ನಮ್ಮ ಶಾಲೆಯಲ್ಲಿ ನಡೆದ ಸಂವಿಧಾನದ ದಿನಾಚರಣೆಯ ಕಾರ್ಯಕ್ರಮದ ವರದಿಯನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ. ಕಾರ್ಯಕ್ರಮಕ್ಕೆ ಸಂಬಂಧಿಸಿ ಛಾಯಾಚಿತ್ರವನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಅಭಿನವ್

**ಅಥವಾ**

ನಿಮ್ಮನ್ನು ಬಸವಕಲ್ಯಾಣದ ಸರ್ಕಾರಿ ಪ್ರೌಢಶಾಲೆಯ 'ಪ್ರವೀಣ' ಎಂದು ಭಾವಿಸಿಕೊಂಡು ಧಾರವಾಡದ ಕಲ್ಯಾಣನಗರದಲ್ಲಿ ವಾಸವಾಗಿರುವ ತಾಯಿ ಶ್ರೀದೇವಿಯವರಿಗೆ ವಿದ್ಯಾಭ್ಯಾಸದ ಪ್ರಗತಿಯನ್ನು ವಿವರಿಸಿ ಪತ್ರ ಬರೆಯಿರಿ.

ಕ್ಷೇಮ

ದಿನಾಂಕ 23.02.2024

ಪ್ರವೀಣ

ಸರ್ಕಾರಿ ಪ್ರೌಢಶಾಲೆ

ಬಸವಕಲ್ಯಾಣ

ಮಾತೃಶ್ರೀಯವರಲ್ಲಿ ನಿಮ್ಮ ಮಗ ಬೇಡುವ ಆಶೀರ್ವಾದಗಳು

ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ನಿನ್ನ ಕ್ಷೇಮ ಸಮಾಚಾರಗಳಿಗೆ ಪತ್ರ ಬರೆಯಬೇಕೆಂದು ಕೇಳಿಕೊಳ್ಳುತ್ತೇನೆ. ಅಮ್ಮ ದಿನವು ನಿನ್ನನ್ನು ನೆನಪಿಸಿಕೊಳ್ಳುತ್ತಿರುತ್ತೇನೆ. ಈ ಪತ್ರ ಬರೆಯಲು ಕಾರಣವೇನೆಂದರೆ ಮುಂದಿನ ತಿಂಗಳು ನಾನು ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿರುವೆ. ಪರೀಕ್ಷೆಗೆ ಚೆನ್ನಾಗಿ ತಯಾರಿ ಮಾಡಿಕೊಳ್ಳುತ್ತಿದ್ದೇನೆ. ಪ್ರತಿದಿನ ಬೆಳಿಗ್ಗೆ 5 ಗಂಟೆಗೆ ಎದ್ದು ಓದುತ್ತಿದ್ದೇನೆ. ಗೊತ್ತಾಗದ ವಿಷಯಗಳನ್ನು ಶಿಕ್ಷಕರೊಂದಿಗೆ ಕೇಳಿ ತಿಳಿಯುತ್ತಿದ್ದೇನೆ. ಸ್ನೇಹಿತೆಯರೊಂದಿಗೆ ಚರ್ಚೆ ಮಾಡುತ್ತಿದ್ದೇನೆ. ಮೊದಲ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಶೇ. 90 ಅಂಕಗಳನ್ನು ಪಡೆದಿದ್ದೆ. ಹಾಗೂ ಎರಡನೇ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಶೇ. 93 ಅಂಕಗಳನ್ನು ಪಡೆದಿದ್ದೆ. ಪಬ್ಲಿಕ್ ಪರೀಕ್ಷೆಯಲ್ಲಿ ಶೇ. 95ಕ್ಕೂ ಹೆಚ್ಚು ಅಂಕಗಳನ್ನು ಪಡೆಯಬೇಕೆಂಬ ಗುರಿಯನ್ನು ಹೊಂದಿರುವೆ.
ನಿಮ್ಮನ್ನೆಲ್ಲಾ ನೋಡಬೇಕೆಂಬ ಹಂಬಲ ಹೆಚ್ಚಾಗಿದೆ. ಪರೀಕ್ಷೆ ಮುಗಿದ ಕೂಡಲೇ ಹೊರಟು ಬರುವೆ. ಉಳಿದಂತೆ ತಮ್ಮ ಶ್ಯಾಂ ಹೇಗಿದ್ದಾನೆ. ಊರಿಗೆ ಬರುವಾಗ ಆಟದ ಗೊಂಬೆಯನ್ನು ತರುವೆ. ನಿಮ್ಮ ಆಶೀರ್ವಾದವನ್ನು ಬಯಸುವ,

ನಿಮ್ಮ ಪ್ರೀತಿಯ ಮಗ

ಪ್ರವೀಣ

ಗೆ,

ಶ್ರೀದೇವಿ

# 625, 10ನೇ ಗಲ್ಲಿ,

ಕಲ್ಯಾಣ ನಗರ, ಧಾರವಾಡ

**ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1x5=5**

45. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

ಯಾವುದೇ ಒಂದು ದೇಶದ ಇತಿಹಾಸವನ್ನು ತಿಳಿಯಬೇಕಾದರೆ ಪ್ರಾಚ್ಯವಸ್ತುಗಳು ಪ್ರಮುಖ ಪಾತ್ರ ವಹಿಸುತ್ತವೆ. ಅದೇ ರೀತಿಯಾಗಿ ಭಾರತದ ಹಾಗೂ ಕರ್ನಾಟಕ ಇತಿಹಾಸದ ಮಹತ್ವದ ವಿಚಾರಗಳನ್ನು ತಿಳಿದುಕೊಳ್ಳಲು ಪ್ರಾಚ್ಯವಸ್ತುಗಳು ಬಹಳ ಮುಖ್ಯವಾಗಿರುತ್ತವೆ. ಅವುಗಳೆಂದರೆ ಶಾಸನಗಳು, ನಾಣ್ಯಗಳು, ಪ್ರಾಚೀನ ದೇವಾಲಯಗಳು, ತಾಮ್ರಪಟ, ತಾಳೆಗರಿ ಮುಂತಾದ



Scanned with OKEN Scanner

ಪ್ರಾಚ್ಯವಸ್ತುಗಳನ್ನು ಸಂರಕ್ಷಿಸುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದೆ . ಪ್ರಾಚ್ಯ ವಸ್ತುಗಳ ಸಂರಕ್ಷಿಸಲು ಕೈಗೊಳ್ಳಬೇಕಾದ ಕ್ರಮಗಳು

* ಪ್ರಾಚ್ಯವಸ್ತುಗಳ ಮಹತ್ವವನ್ನು ಪ್ರತಿಯೊಬ್ಬರಿಗೂ ತಿಳಿಸಿ ಕೊಡಬೇಕು.
* ಪ್ರಾಚ್ಯವಸ್ತುಗಳ ಸಂರಕ್ಷಣೆಗಾಗಿ ಇಲಾಖೆಯಿಂದ ವಿಶೇಷ ಕಾಳಜಿ ವಹಿಸುವುದು ಹಾಗೂ ಕಾನೂನುಗಳನ್ನು ರೂಪಿಸುವುದು.
* ಪ್ರಾಚ್ಯವಸ್ತುಗಳ ಕೇಂದ್ರಗಳನ್ನು ಪ್ರವಾಸಿ ತಾಣಗಳನ್ನಾಗಿ ಪರಿವರ್ತಿಸುವುದು.
* ಪ್ರಾಚ್ಯವಸ್ತುಗಳ ಸ್ಥಳ, ಕೇಂದ್ರಗಳನ್ನು ಪುನರುಜ್ಜೀವನಗೊಳಿಸುವುದು.
* ಐತಿಹಾಸಿಕ ಕೇಂದ್ರಗಳಲ್ಲಿ ವಸ್ತುಸಂಗ್ರಹಾಲಯಗಳನ್ನು ನಿರ್ಮಿಸಿ ಪ್ರಾಚ್ಯವಸ್ತುಗಳನ್ನು ಸಂರಕ್ಷಿಸುವುದು.
* ಪ್ರಾಚ್ಯವಸ್ತುಗಳನ್ನು ಸಂಗ್ರಹಿಸಿದ ಜನರಿಗೆ ಪ್ರೋತ್ಸಾಹ ನೀಡುವುದು.
* ಐತಿಹಾಸಿಕ ಸ್ಥಳಗಳಲ್ಲಿ ಜನವಸತಿಯನ್ನು ನಿಷೇಧಿಸುವುದು.
* ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪ್ರಾಚ್ಯ ವಸ್ತುಗಳ ಸಂರಕ್ಷಣೆ ಕುರಿತು ಮಾಧ್ಯಮಗಳ ಮೂಲಕ ಜಾಹೀರಾತು ನೀಡುವುದು.
* ಪ್ರಾಚ್ಯವಸ್ತುಗಳ ಮಹತ್ವವನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸುವುದು.

ನಮ್ಮ ದೇಶ ಐತಿಹಾಸಿಕವಾಗಿ ತನ್ನದೆ ಆದ ಪ್ರಾಮುಖ್ಯತೆ ಪಡೆದರೂ ಕೂಡ ಬೇರೆ ದೇಶಗಳಿಗೆ ಹೋಲಿಸಿದರೆ ಪ್ರಾಚ್ಯವಸ್ತುಗಳ ಸಂರಕ್ಷಣೆಗೆ ನಾವು ನೀಡುವ ಪ್ರೋತ್ಸಾಹ ಹಾಗೂ ಸಂರಕ್ಷಣಾ ಕ್ರಮ ನೋಡಿದರೆ ಇನ್ನೂ ಕಡಿಮೆ ಎನಿಸುತ್ತದೆ. ಆದ್ದರಿಂದ ಪ್ರಾಚ್ಯವಸ್ತುಗಳು ಒಂದು ದೇಶದ ಆಸ್ತಿ ಇದ್ದ ಹಾಗೆ ಅವುಗಳ ಸಂರಕ್ಷಣೆ ನಮ್ಮ ನಿಮ್ಮೆಲ್ಲರ ಹೊಣೆ.

**ಅಥವಾ**

ಸ್ವಚ್ಛ ಭಾರತ ಅಭಿಯಾನ

ಭವ್ಯ ಭಾರತ ನಿರ್ಮಾಣದ ಕನಸ್ಸನ್ನು ಕಾಣುತ್ತಿರುವ ಸನ್ಮಾನ್ಯ ಪ್ರಧಾನಮಂತ್ರಿಯವರಾದ ಶ್ರೀ ನರೇಂದ್ರ ಮೋದಿಯವರ ಕನಸಿನ ಕೂಸು ಸ್ವಚ್ಛ ಭಾರತ ಅಭಿಯಾನ ಯೋಜನೆ. ಇದನ್ನು ಪ್ರಧಾನಮಂತ್ರಿಯವರು ದಿನಾಂಕ: 2/10/2014 ರಂದು ಗಾಂಧೀಜಿಯವರ ಜನ್ಮದಿನದಂದು ಘೋಷಿಸಿದರು. ಇದು ಸಮುದಾಯ ಅಭಿವೃದ್ಧಿ ಕಾರ್ಯಕ್ರಮವಾದ 'ನಿರ್ಮಲ ಭಾರತ ಅಭಿಯಾನದ' ಮುಂದುವರೆದ ಭಾಗವಾಗಿದೆ.

ಉದ್ದೇಶಗಳು:

* ಬಯಲು ಮುಕ್ತ ಶೌಚಾಲಯಗಳನ್ನು ರೂಪಿಸುವುದು.
* ಸ್ವಚ್ಛತೆಗೆ ಒತ್ತು ಹಾಗು ಒಳಚರಂಡಿ ವ್ಯವಸ್ಥೆ
* ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಆದ್ಯತೆ ನೀಡುವುದು.
* ತ್ಯಾಜ್ಯಗಳ ಸಮರ್ಪಕ ಸಂರಕ್ಷಣೆ ಹಾಗು ನಿರ್ವಹಣೆ

ಇವೇ ಮೊದಲಾದ ಘನೋದ್ದೇಶಗಳನ್ನು ಕಾರ್ಯಕ್ರಮವು ಹೊಂದಿದೆ. ಈ ಕಾರ್ಯಕ್ರಮಕ್ಕೆ ಆಯವ್ಯಯದಲ್ಲಿ ಸಾಕಷ್ಟು ಹಣ ನಿಗದಿ ಮಾಡಿದ್ದು, ಅನುಷ್ಠಾನಕ್ಕಾಗಿ ವಿಶೇಷ ವ್ಯಕ್ತಿಗಳು, ನಟರು ಹಾಗು ಸಮಾಜ ಸೇವಕರು ರಾಯಭಾರಿಗಳಾಗಿ ತೊಡಗಿಸಿಕೊಂಡಿದ್ದಾರೆ. ಅಲ್ಲದೆ ಘನವೆತ್ತ ಭಾರತ ಸರ್ಕಾರವು ಸ್ವಚ್ಛ ನಗರಗಳನ್ನು ಗುರುತಿಸಿ, ಪ್ರೋತ್ಸಾಹಿಸುತ್ತಿದೆ. ಗಾಂಧೀಜಿಯವರು ಕಂಡಿದ್ದ ಸ್ವಚ್ಛ ಭಾರತದ ಕನಸನ್ನು ನನಸಾಗಿಸಲು ಪ್ರತಿಯೊಬ್ಬ ನಾಗರಿಕನು ಕೈ ಜೋಡಿಸಿದ್ದಲ್ಲಿ ಸಕಾರಗೊಳಿಸಬಹುದಾಗಿದೆ.



Scanned with OKEN Scanner

**10ನೇ ತರಗತಿ – ಪ್ರಥಮ ಭಾಷೆ – ಕನ್ನಡ**
**ಮಾದರಿ ಪ್ರಶ್ನೆ ಪತ್ರಿಕೆ – 2**

**ಸಮಯ : 3.15ಗಂ.** **ಅಂಕಗಳು : 100**

**ಬಹು ಆಯ್ಕೆ ಪ್ರಶ್ನೆಗಳು** **6x1=6**

1. ಒಬ್ಬರು ಹೇಳಿದ ಮಾತನ್ನು ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.
(ಎ) ಭಾವಸೂಚಕ (ಬಿ) ಪೂರ್ಣವಿರಾಮ (ಸಿ) ಉದ್ಧರಣ (ಡಿ) ಆವರಣ
2. 'ದೇವಾಲಯ' ಪದದಲ್ಲಿ ಆಗಿರುವ ಸಂಧಿ;
(ಎ) ಸವರ್ಣದೀರ್ಘ (ಬಿ) ವೃದ್ಧಿ (ಸಿ) ಜಶ್ತ್ವ (ಡಿ) ಗುಣ
3. 'ಕೃಷ್ಣಾರ್ಜುನರು' ಪದವು ಈ ಸಮಾಸಕ್ಕೆ ಉದಾಹರಣೆ:
(ಎ) ಅಂಶಿ ಸಮಾಸ (ಬಿ) ದ್ವಿಗು ಸಮಾಸ (ಸಿ) ಬಹುವ್ರೀಹಿ ಸಮಾಸ (ಡಿ) ದ್ವಂದ್ವ ಸಮಾಸ
4. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂಥ ವಾಕ್ಯವನ್ನು
(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ (ಸಿ) ಮಿಶ್ರವಾಕ್ಯ (ಡಿ) ಪ್ರಧಾನ ವಾಕ್ಯ
5. ಪಂಚಮಿ ವಿಭಕ್ತಿಯ ಕಾರಕಾರ್ಥವಿದು:
(ಎ) ಕರ್ತೃ (ಬಿ) ಅಪಾದಾನ (ಸಿ) ಕರಣಾರ್ಥ (ಡಿ) ಸಂಪ್ರದಾನ
6. 'ಹೇಳಲಿಕ್ಕೆ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.
(ಎ) ಕೃದಂತ (ಬಿ) ಕೃದಂತ ಭಾವನಾಮ (ಸಿ) ಕೃದಂತಾವ್ಯಯ (ಡಿ) ತದ್ಧಿತಾಂತ

**ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4x1= 4**

7. ಪರೀಕ್ಷಿಸು : ಪರಿಕಿಸು :: ವರ್ಣ : ________
8. ಹಚ್ಚೋಣ : ವಿಧ್ಯರ್ಥಕ :: ಬಂದೀತು : ____
9. ಹಿಮಾಲಯ : ಅಂಕಿತ ನಾಮ :: ಬೆಟ್ಟ : _____
10. ಹಚ್ಚಹಸಿರು : ದ್ವಿರುಕ್ತಿ :: ಹಣ್ಣುಹಂಪಲು: ______

**ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7x1=7**

11. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
12. ರಾಹಿಲನು ಯಾರು?
13. ಅರಸ ವೃಷಭಾಂಕನ ಉಂಗುರವು ಯಾವಾಗ ಕೆಳಕ್ಕೆ ಬಿದ್ದಿತು?
14. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತು ಹೇಗೆ ಕಳೆದನು?
15. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?
16. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?
17. ಪೈಗಳು ಬರೆದ ಮೊದಲ ಯಕ್ಷಗಾನದ ಪ್ರಸಂಗದ ಹೆಸರೇನು?

**ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10x2=20**

18. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?
19. ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು?
20. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳು ಯಾವುವು?
21. ಟೊಪ್ಪಿಗೆಯ ವಿಷಯವನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?
22. ಕವಿಗೆ ಯಾವು ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ?
23. ಪಾರ್ಥ ಭೀಮರ ಬಗ್ಗೆ ದುರ್ಯೋಧನನ ಅಭಿಪ್ರಾಯವೇನು?
24. ಕ್ರಿಯಾ ಸ್ವಾತಂತ್ರ್ಯ ಎಂದರೇನು?
25. 'ವಸಂತ ಮುಖ ತೋರಲಿಲ್ಲ' ಪದ್ಯದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?
26. ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣೆ ಬರೆಯಿರಿ.
27. ನಾರಾಯಣಗುರು ಧರ್ಮಪರಿಪಾಲನಾ ಯೋಗಂ ಸಂಘಟನೆಯ ಕೊಡುಗೆಗಳನ್ನು ತಿಳಿಸಿ.

**ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2x3=6**

28. ಪು.ತಿ.ನ 29. ಕುಮಾರವ್ಯಾಸ


Scanned with OKEN Scanner

**ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1x3=3**

30. ಪುಟ್ಟಿದನೂರ್ವರುಮೆನ್ನೊಡ
ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ

**ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. 1x3=3**

31. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

**ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1x3=3**

32. ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ.

**ಅಥವಾ**

ಕಟ್ಟುವುದು ಕಠಿಣ; ಕೆಡಹುವುದು ಸುಲಭ

**ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6x3=18**

33. "ಗುರೂಪದೇಶ ಎಂದರೆ ತಲೆನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು'
34. "ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು."
35. "ಹುಸಿಯದ ಬೇಹಾರಿಯೇ ಇಲ್ಲ"
36. "ಜಾನಕಿಯ ಮಗನಿದಕೆ ಬೆದರುವನೆ"
37. "ನೆಲಕಿರಿವೆನೆಂದು ಬಗೆದಿರೆ ಚಲಕಿರಿವೆಂ"
38. "ಈಗಳೊಂದು ಅಡಕೆಯುಮಿಲ್ಲ ಕೈಯೊಳ್"

**ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1x4=4**

39. ಕಲುಷಿತವಾದಿ. . . . ಮುಟ್ಟೋಣ ।

**ಅಥವಾ**

ಮತಗಳೆಲ್ಲವೂ . . . . . ಬಿತ್ತೋಣ ।

**ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ. 1x4=4**

40. ಇರುಳಿರುಳಳಿದು ದಿನ ದಿನ ಬೆಳಗೆ
ಸುತ್ತಮುತ್ತಲೂ ಮೇಲಕೆ ಕೆಳಗೆ
ಗಾವುದ ಗಾವುದ ಗಾವುದ ಮುಂದೆ
ಎವೆತೆರೆದಿಕ್ಕುವ ಹೊತ್ತಿನ ಒಳಗೆ
ಹಕ್ಕಿ ಹಾರುತಿದೆ ನೋಡಿದಿರಾ?

**ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2x4=8**

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

**ಅಥವಾ**

ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

42. ಹಲಗಲಿ ದಂಗೆಗೆ ಕಾರಣವೇನು? ಸರ್ಕಾರ ಅದನ್ನು ಹೇಗೆ ನಿಯಂತ್ರಿಸಿತು?

**ಅಥವಾ**

ಹಲಗಲಿ ದಂಗೆಯ ಪರಿಣಾಮವೇನು?

**ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1 x 4=4 (2+2)**

ಕನ್ನಡ ನಾಡಿನ ಶರಣರ ವಚನ ಚಳುವಳಿ ಎಂದ ಕೂಡಲೇ ಅದು ಜಾತಿ, ಮತ ಭೇದವಳಿಸಿ ಸರ್ವಸಮಾನತೆಯನ್ನು ತೋರಿದುದು. ಅದು ಇಂದಿಗೂ ಕನ್ನಡ ಮನಸ್ಸಿನ ಪ್ರಗತಿಪರತೆಯ ದ್ಯೋತಕವಾಗಿದೆ. ಇಂದಿನ ಪ್ರಗತಿಪರ ಚಿಂತನೆ ಆಗಾಗ್ಗೆ ವಚನ ಚಳುವಳಿಯ ಕಡೆಗೆ ಮಹಾತ್ವಾಕಾಂಕ್ಷೆಯಿಂದ ತಿರುಗಿ ನೋಡುವಂತೆ ಮಾಡಿದೆ. ವಚನ ಚಳುವಳಿಯಲ್ಲಿ ಧಾರ್ಮಿಕ ಕ್ರಾಂತಿಯೊಡನೆ ಸಾಮಾಜಿಕ ಸುಧಾರಣೆಯೂ ಸೇರಿಕೊಂಡಿದೆ. ಇಂತಹ ಪ್ರಭಾವಗಳ ಮಧ್ಯೆ ಮತಪ್ರಚಾರ ಮತ್ತು ಸಂಘರ್ಷ ಭಿನ್ನವಾಗಿಯೇ ದಾಖಲಾಗಿದೆ. ದುರಾಚಾರದ ಖಂಡನೆಯಾಗಿ, ಮೌಢ್ಯದ ಖಂಡನೆಯಾಗಿ ಬರುತದ್ದೆ. ಜನಪದ ಧಾರ್ಮಿಕ ಆಚರಣೆಗಳು ಹೆಚ್ಚಾಗಿ ಅವುಗಳ ದಾಳಿಗೀಡಾಗಿವೆ. ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ವಚನ ಚಳುವಳಿಯ ಹಾದಿ ಮರೆತು ಹೋಗಿದೆ. ಎಂಬ ಭಾವನೆ



Scanned with OKEN Scanner

ಮೂಡುತದ್ದೆ. ಬೇರೆ ಬೇರೆ ಮತಗಳ ಸುಸಂಗತ ವಿಚಾರಗಳನ್ನು, ಸಂಸ್ಕೃತಿ ಆಚರಣೆಗಳನ್ನು ಸಹ ಸಂಪೂರ್ಣವಾಗಿ ಸಹಿಸಿಕೊಳ್ಳಲು ಸಮರ್ಥರಾಗಿ ನಮ್ಮ ಆಚಾರ ವಿಚಾರಗಳನ್ನು ಬೇರೆಡೆಗೆ ಪಸರಿಸಿ ಸರ್ವ ಸಮಭಾವ ನೆಲೆಯಲ್ಲಿ ಸಾಗುವುದು ಕನ್ನಡಿಗರ ವಿವೇಕ. ಅದು ಎಲ್ಲರ ಮನಗಳನ್ನು ಬೆಳಗಲಿ.

**ಪ್ರಶ್ನೆಗಳು:**

**43.** ಅ) ಕನ್ನಡಿಗರ ವಿವೇಕ ಏನಾಗಿರಬೇಕು?

ಬ) ವಚನ ಚಳುವಳಿಯ ಪ್ರಭಾವವೇನು?

**ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ, ಪತ್ರ ಬರೆಯಿರಿ. 1x5=5**

**44.** ನಿಮ್ಮನ್ನು ಬಾಗಲಕೋಟೆ ಜಿಲ್ಲೆಯ ಮುದ್ದೇಬಿಹಾಳ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ/ನಿ **'ರೋಹಿತ್'**/ ರೋಹಿಣಿ ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಕೈಗೊಂಡ ವಾರ್ಷಿಕೋತ್ಸವ ಕುರಿತು ನಿಮ್ಮ ಗೆಳೆಯ/ ಗೆಳತಿಗೆ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಸಚಿನ್/ ಸೃಜನ ಎಂದು ಭಾವಿಸಿ ನಿಮ್ಮ ಬಡಾವಣೆಯಲ್ಲಿ ಶುದ್ಧನೀರಿನ ಘಟಕ ಸ್ಥಾಪಿಸುವಂತೆ ಕೋರಿ ನಗರಸಭಾ ಅಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.

**ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1x5=5**

**45.** ಸ್ವಚ್ಛಭಾರತ ಅಭಿಯಾನ **ಅಥವಾ** ರಾಷ್ಟ್ರೀಯ ಹಬ್ಬಗಳ ಮಹತ್ವ



Scanned with OKEN Scanner

**10ನೇ ತರಗತಿ – ಪ್ರಥಮ ಭಾಷೆ – ಕನ್ನಡ**

**ಮಾದರಿ ಪ್ರಶ್ನೆ ಪತ್ರಿಕೆ – 3**

**ಸಮಯ : 3.15ಗಂ.** **ಅಂಕಗಳು : 100**

**ಬಹು ಆಯ್ಕೆ ಪ್ರಶ್ನೆಗಳು** **6x1=6**

1. **'ಮಳೆಗಾಲ'** ಪದವು ಈ ಸಂಧಿಗೆ ಸೇರಿದೆ

ಎ) ಆಗಮ ಬಿ) ಆದೇಶ ಸಿ) ಸವರ್ಣದೀರ್ಘ ಡಿ) ಯಣ್

2. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

ಎ) ಪೂರ್ಣ ವಿರಾಮ ಬಿ) ಅಲ್ಪ ವಿರಾಮ ಸಿ) ಅರ್ಧ ವಿರಾಮ ಡಿ) ಉದ್ಧರಣ

3. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು

ಎ) ಸಂಯೋಜಿತ ವಾಕ್ಯ ಬಿ) ಮಿಶ್ರ ವಾಕ್ಯ ಸಿ) ಸಂಯುಕ್ತ ವಾಕ್ಯ ಡಿ) ಸಾಮಾನ್ಯ ವಾಕ್ಯ

4. ಸಪ್ತಮಿ ವಿಭಕ್ತಿಯಕಾರಕಾರ್ಥ

ಎ) ಕರಣಾರ್ಥ ಬಿ) ಅಧಿಕರಣ ಸಿ) ಸಂಪ್ರದಾನ ಡಿ) ಅಪಾದಾನ

5. ಸಂಬಂಧಾರ್ಥಕಾವ್ಯಯಕ್ಕೆ ಉದಾಹರಣೆಯಿದು

ಎ) ನೀನೇ ಬಿ) ಸಾಕು ಸಿ) ಬೇಗನೆ ಡಿ) ಆದ್ದರಿಂದ

6. **'ಮಾಡು'** ಧಾತುವಿನ ನಿಷೇಧಾರ್ಥಕ ಕ್ರಿಯಾರೂಪ

ಎ) ಮಾಡುವನು ಬಿ) ಮಾಡನು ಸಿ) ಮಾಡಿಯಾನು ಡಿ) ಮಾಡೋಣ

**ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.**

**4x1=4**

7. ಮೊತ್ತಮೊದಲು : ದ್ವಿರುಕ್ತಿ : : ಥಣಥಣ : __

8. ಕಂಗೆಡು :ಕ್ರಿಯಾಸಮಾಸ : : ನೆಯ್ದುವಸ್ತ್ರ: ________

9. ದ್ಯೂತ :ಜೂಜು : : ವಿದ್ಯಾಧರ : ______________

10. ಬಳೆಗಾರ :ತದ್ಧಿತಾಂತನಾಮ : : ಮಾಟ : _______

**ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7x1=7**

11. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?
12. ಗಡಿ ಪ್ರದೇಶಗಳಲ್ಲಿ **'ಬ್ಲಾಕ್ ಔಟ್'** ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?
13. ಯಶೋಭದ್ರೆಯು ರತ್ನ ಕಂಬಳಿಗಳನ್ನು ಯಾರಿಗೆ ಕೊಟ್ಟಳು?
14. ದುಷ್ಟಬುದ್ಧಿಯುತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?
15. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು ?
16. ದಿನಪಸುತ ಎಂದರೆ ಯಾರು?
17. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?

**ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10x2=20**

18. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.
19. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?
20. ಗುರೂಪದೇಶವು ಯಾರಿಗೆ ಮೆಚ್ಚಿಕೆಯಾಗುವುದಿಲ್ಲ?
21. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?
22. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?
23. ದ್ರುಪದನು ದ್ರೋಣರಿಗೆ ಗರ್ವದಿಂದ ಹೇಳಿದ ಮಾತುಗಳು ಯಾವುವು?
24. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?
25. ಜಲಿಯನ್ ವಾಲಾಭಾಗ್‌ನಲ್ಲಿರುವ ಒಕ್ಕಣೆ ಏನು?
26. ಸ್ವದೇಶೀ ಆರ್ಥಿಕತೆ ಬಲಪಡಿಸಲು ಹಬ್ಬಗಳಲ್ಲಿ ಸ್ವದೇಶೀ ವಸ್ತುಗಳನ್ನೇ ಬಳಸಲು ಪ್ರಾರಂಭಿಸಬೇಕು – ಈ ಕುರಿತು ನಿಮ್ಮ ಅಭಿಪ್ರಾಯವೇನು?
27. ಮುದ್ದಣ ಕವಿ ಲೇಖಕರಿಗೆ ಏನೆಂದು ಸಲಹೆ ಕೊಟ್ಟರು?

**ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2x3=6**

28. ಪು.ತಿ. ನರಸಿಂಹಾಚಾರ್ 29. ಕುವೆಂಪು



Scanned with OKEN Scanner

**ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. 1x3=3**

30. ಉರ್ವಿಯೊಳ್ ಕೌಸಲ್ಯೆ ಪಡೆದಕುವರಂರಾಮ ।
ನೊರ್ವನೇ ವೀರನಾತನಯಜ್ಞತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂತಡೆಯಲೆಂದಿರ್ದ ಲೇಖನವನೋದಿ

**ಕೆಳಗಿನ ವಾಕ್ಯದಲ್ಲಿರುವಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ. 1x3=3**

31. ಅಚ್ಛೋದ ಸರೋವರವುತ್ರೈಲೋಕ್ಯಲಕ್ಷ್ಮಿಯುತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟರನ್ನಗನ್ನಡಿಯೋ ಎಂಬಂತೆ ಶೋಭಿಸಿತು.

**ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1x3=3**

32. ಆಳಾಗಬಲ್ಲವನು; ಅರಸನಾಗಬಲ್ಲನು

**ಅಥವಾ**

ಹೆತ್ತ ತಾಯಿ; ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.

**ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6x3=18**

33. "ತಾವುಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ."
34. "ಸಂಪತ್ತು ಸಿಕ್ಕಿತು ಎಂದ ಮಾತ್ರಕ್ಕೆಯೆ ಸುಖವುಂಟೆ?"
35. "ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ! ಮಣ್ಣು! ಮಣ್ಣು!"
38. "ಪಾಂಡವರೊಳಿಜಿದು ಛಲಮನೆ ಮೆರೆವೆಂ."
36. "ನಾಲ್ಕು ಮಂದಿ ಹಿಂಗ ಕಡಿದು ಸತ್ತರೊ ಹಲಗಲಿ ಬಂಟರಣ್ಣಜನಕ"
37. "ರವಿಸುತನಕಿವಿಯಲಿ ಬಿತ್ತಿದನು ಭಯವ"

**ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1x4=4**

39. ನೀಲಮೇಘಮಂಡಲ . . . . . . . ಹಕ್ಕಿ ಹಾರುತಿದೆ ನೋಡಿದಿರಾ ?

**ಅಥವಾ**

ಯುಗ–ಯುಗಗಳ . . . . . . ಹಕ್ಕಿ ಹಾರುತಿದೆ ನೋಡಿದಿರಾ?

**ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1x4=4**

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ॥
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು

**ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2x4=8**

**41**. ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

**42**. ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ?

**ಅಥವಾ**

ದ್ರೋಣನೂ ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ?

**ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1x4=4(2+2)**

**43**. ಇಡೀ ಕನ್ನಡ ಸಾಹಿತ್ಯಕ್ಕೆ ವಿಶ್ವಮುಖಿ ಶಕ್ತಿ ಬಂದದ್ದು– 12ನೇ ಶತಮಾನದ ವಚನಕಾರರಿಂದ, 900 ವರ್ಷಗಳ ಹಿಂದೆಯೇ ಕನ್ನಡದ ವಚನವಾರಿಧಿ ತುಂಬಿ ತುಳುಕಿ ನೆರೆಹೊರೆಗೆಲ್ಲಾ ತನ್ನ ಸಾಹಿತ್ಯಕ ನರುಗಂಪನ್ನು ಪಸರಿಸಿದ್ದು ಐತಿಹಾಸಿಕ ದಾಖಲೆ. ಅಲ್ಲಮಪ್ರಭುವಿನ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಅನುಭವ ಮಂಟಪ ಮಾದರಿ ಪಾರ್ಲಿಮೆಂಟಿನಂತೆ ವಿಶ್ವವಿಖ್ಯಾತವಾಗಿದೆ. ಭಕ್ತಿ ಭಂಡಾರಿ ಬಸವಣ್ಣ ಅವರು ಕೈ ಗೊಂಡ ಸಾಮಾಜಿಕ ಕಾರ್ಯಗಳು ಅಂದಿನ ಆಡಳಿತಗಾರರ ಸಮಾಜಮುಖಿಧೋರಣೆಯನ್ನು



Scanned with OKEN Scanner

ಸೂಚಿಸುತ್ತವೆ. ಎಲ್ಲ ವಚನಕಾರರಿಗೂ ಅನುಭವ ಮಂಟಪದಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಸ್ವಾತಂತ್ರ್ಯವಿತ್ತು. ವಚನ ಹೇಳಲು ಸಂಪೂರ್ಣ ಸ್ವಾತಂತ್ರ್ಯವಿತ್ತು. ಹೀಗಾಗಿ ಸರ್ವದ ಏಳಿಗೆಗೂ ಅದು ನಾಂದಿಯಾಯಿತು. ಸಾಮಾಜಿಕ ನ್ಯಾಯದ ಪರಿಕಲ್ಪನೆ ಮೂಡಿ ಅದು ಸಾಕಾರವಾಗಿ ಅಸ್ತಿತ್ವಕ್ಕೆ ಬಂದು ಆದರ್ಶವಾಗಿ ಪರಿಪಾಲನೆಯಾದದ್ದು ಇದೇ ಸಂದರ್ಭದಲ್ಲಿ. ಆಗಿನ ಸಮಾಜ ಸ್ವಾಸ್ಥ್ಯವನ್ನು ಮಾದರಿಯಾಗಿ ನಾವೆಲ್ಲಾ ಅನುಸರಿಸುವುದು ಒಳಿತು. ಸಿದ್ಧರಾಮ, ಚೆನ್ನಬಸವಣ್ಣ, ಮಾದಾರಚೆನ್ನಯ್ಯ, ಡೋಹರಕಕ್ಕಯ್ಯ, ಮೋಳಿಗೆ ಮಾರಯ್ಯ, ಹರಳಯ್ಯ, ಸಂಕವ್ವ ಮುಂತಾಗಿ ನೂರಾರು ವಚನಕಾರರು ಒಂದು ವಿನೂತನವಾದ ಹಾದಿಯನ್ನೇ ತೆರೆದರು. ಇಂದಿಗೂ ಅದು ನಮಗೆ ಬೆನ್ನ ಹಿಂದಿನ ನೆಚ್ಚಿನ ಹೊಂಬೇಕಾಗಿರುವುದು ಸ್ಮರಣೀಯ,ಅನುಸರಣೀಯಕೂಡ.

**ಪ್ರಶ್ನೆಗಳು:**

**ಅ**) ಸಮಕಾಲೀನ ಸಂದರ್ಭದಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆ ಮೂಡಿಸಲು ವಚನ ಸಾಹಿತ್ಯದ ಔಚಿತ್ಯವೇನು?

**ಆ**) ವಚನ ಸಾಹಿತ್ಯವು ಸರ್ವರ ಏಳಿಗೆಗೆ ಹೇಗೆ ನಾಂದಿಯಾಯಿತು?

**ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

44. ನಿಮ್ಮನ್ನು ವಿಜಯನಗರ ಜಿಲ್ಲೆಯ ನಿವಾಸಿ 'ಪ್ರಥಮ್' ಎಂದು ಭಾವಿಸಿಕೊಂಡು, ನಿಮ್ಮ ಊರಿನಲ್ಲಿ ಗ್ರಂಥಾಲಯವನ್ನು ಸ್ಥಾಪಿಸುವಂತೆ ಕೋರಿ, ನಿಮ್ಮ ಶಾಸಕರಿಗೆ ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಹಾವೇರಿ ಜಿಲ್ಲೆಯ ರಟ್ಟೀಹಳ್ಳಿ ತಾಲ್ಲೂಕಿನ ಹಿರೇಕಬ್ಬಾರನ ಸರ್ಕಾರಿ ಪ್ರೌಢಶಾಲೆಯ **'ಕೃತಿಕಾ'** ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ವಿವರಿಸಿ, ಮೈಸೂರಿನಕುವೆಂಪುನಗರದಲ್ಲಿ ವಾಸವಾಗಿರುವ **'ಅದಿತ್'** ಎಂಬ ಹೆಸರಿನಗೆಳೆಯನಿಗೆ ಪತ್ರ ಬರೆಯಿರಿ.

**ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ. 1x5=5**

45. ಶಾಲಾ ಇಕೋ-ಕ್ಲಬ್‌ನ ಕಾರ್ಯಚಟುವಟಿಕೆಗಳು

**ಅಥವಾ**

ಅಂತರ್ಜಲ ಸಂರಕ್ಷಣೆಯ ಮಹತ್ವ



Scanned with OKEN Scanner

## 10ನೇ ತರಗತಿ – ಪ್ರಥಮ ಭಾಷೆ – ಕನ್ನಡ
## ಮಾದರಿ ಪ್ರಶ್ನೆ ಪತ್ರಿಕೆ – 4

**ಸಮಯ : 3.15ಗಂ.** **ಅಂಕಗಳು : 100**

**ಬಹು ಆಯ್ಕೆ ಪ್ರಶ್ನೆಗಳು** **6x1=6**

1. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಭಿಪ್ರಾಯದ ವಾಕ್ಯವಿದು

ಎ) ಸಾಮಾನ್ಯ ವಾಕ್ಯ ಬಿ) ಮಿಶ್ರವಾಕ್ಯ ಸಿ) ಸರಳವಾಕ್ಯ ಡಿ) ಸಂಯೋಜಿತವಾಕ್ಯ

2. ಜಾತ್ಯತೀತ ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಎ) ಗುಣ ಸಂಧಿ ಬಿ) ವೃದ್ಧಿ ಸಂಧಿ ಸಿ) ಯಣ್ ಸಂಧಿ ಡಿ) ಜಶ್ತ್ವ ಸಂಧಿ

3. ಚತುರ್ಥೀ ವಿಭಕ್ತಿ ಪ್ರತ್ಯಯದ ಕಾರಕರ್ಥ

ಎ) ಸಂಪ್ರದಾನ ಬಿ) ಕರಣಾರ್ಥ ಸಿ) ಕರ್ಮಾರ್ಥ ಡಿ) ಕರ್ತ್ರಾರ್ಥ

4. ತಿನ್ನುವರು ಎಂಬ ಪದದ ಸಂಭಾವನಾರ್ಥಕ ರೂಪ

ಎ) ತಿನ್ನಲಿ ಬಿ) ತಿನ್ನರು ಸಿ) ತಿನ್ನಿಯಾರು ಡಿ) ತಿಂದರು

5. 'ಕರಿತುರಗರಥ' ಎಂಬ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

ಎ) ತತ್ಪುರುಷ ಸಮಾಸ ಬಿ) ದ್ವಿಗು ಸಮಾಸ ಸಿ) ಅಂಶಿ ಸಮಾಸ ಡಿ) ದ್ವಂದ್ವ ಸಮಾಸ

6. ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಬಳಸುವ ಚಿಹ್ನೆ.

ಎ) ಪೂರ್ಣ ವಿರಾಮ ಬಿ) ಅರ್ಧ ವಿರಾಮ ಸಿ) ಅಲ್ಪ ವಿರಾಮ ಡಿ) ಭಾವಸೂಚಕ

**ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧಿಸಿದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂದೀ ಪದವನ್ನು ಬರೆಯಿರಿ.** **4x1=4**

7. ಬಂಜೆ : ವಂಧ್ಯಾ :: ಸಂದೆಯ : -------
8. ಅಸು : ಪ್ರಾಣ :: ವಾಸಿ : -----------
9. ಮಾಟ : ಕೃದಂತಭಾವನಾಮ :: ಮಾಡಿದ : ---------
10. ಸತಿಪತಿ : ಜೋಡುನುಡಿ :: ತುತ್ತತುದಿ :-----

**ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7x1=7**

11. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?
12. ದಿನಪಸುತ ಎಂದರೆ ಯಾರು?
13. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?
14. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?
15. ನೈಮಿತ್ತಿಕನು ಸುಕುಮಾರಸ್ವಾಮಿಯ ಬಗ್ಗೆ ಏನು ಹೇಳಿದನು?
16. 'ಸೌಮಿತ್ರಿ' ಎಂದು ಯಾರನ್ನು ಕರೆಯುವರು?
17. ಆಂಗ್ಲ ಸಾಮಾಜ್ಯದ ವೈಭವ ಕಂಡುಬರುವ ಓಣಿ ಯಾವುದು?

**ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10x2=20**

18. ಟೊಪ್ಪಿಗೆಯ ವಿಷಯವನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?
19. ದುಡ್ಡಿನ ನಿಜರೂಪವೇನು?
20. ಸಿರಿಯು ರಾಜರಿಗೆ ಒಲಿದರೆ ಏನೇನು ಅನಾಹುತಗಳಾಗುತವ್ತೆ?
21. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?
22. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?
23. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?
24. 'ಅನ್ ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?
25. ಜಲಿಯನ್ ವಾಲಾಭಾಗ್ ನಲ್ಲಿರುವ ಒಕ್ಕಣೆ ಏನು?
26. ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು?
27. ಮುದ್ದಣ ಕವಿ ಲೇಖಕರಿಗೆ ಏನೆಂದು ಸಲಹೆ ಕೊಟ್ಟರು?

**ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2x3=6**

28. ದುರ್ಗಸಿಂಹ
29. ರನ್ನ



Scanned with OKEN Scanner

**ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ,ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 3x1=3**

30. ತಳಿವಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತನೇ

**ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ. 3x1=3**

31. ಮಾರಿಗೌತಣವಾಯ್ತು ನಾಳಿನ ಭಾರತವು

**ಕೆಳಗಿನ ಗಾದೆಗಳಲ್ಲಿ ಯಾವುದಾದರೊಂದು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 3x1=3**

32. ಮಾಡಿದುಣ್ಣೊ ಮಾರಾಯ

**ಅಥವಾ**

ಮಾತೇ ಮುತ್ತು, ಮಾತೇ ಮೃತ್ಯು

**ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 3x6=18**

33. 'ನೊಳವಿಂಗೆ ಕುಪ್ಪೆ ವರಂ'
34. 'ಸಾಮಾಜಿಕ ಕಾನೂನುಗಳ ಹರಿಕಾರ'
35. "ರಿಸಿಯರ ರೂಪಂ ಕಾಣ್ಬುಮಂದೀತನುಂ ತಪಂಬಡುಗುಮ್"
36. "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ""
37. 'ಬೇರೆ ಬಣ್ಣವನೆ ಕಾಣೆ'
38. 'ಸಮರದೊಳೆನಗಜ್ಜ ಪೇಳಿಮಾವುದು ಕಜ್ಜಂ'

**ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 4x1=4**

39. ಕೊರಳಸೆರೆ ಹಿಗ್ಗಿದವು ದೃಗುಜಲ. . . . . . ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

**ಅಥವಾ**

ಮಾರಿಗೌತಣವಾಯ್ತು ನಾಳಿನ . . . . . . . ವೀರರೈವರ ನೋಯಿಸೆನು ರಾಜೀವಸಖನಾಣೆ

**ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 4x1=4**

40. ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳ ಲೋಕದ ಅಂಗಳಕೇರಿ
ಹಕ್ಕಿ ಹಾರುತ್ತಿದೆ ನೋಡಿದಿರಾ?

**ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 4x2=8**

41. ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

42. ಹಸುರು ಕವನದಲ್ಲಿ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ.

**ಅಥವಾ**

ಹಸುರು ಕವನದಲ್ಲಿ ಮೂಡಿಬಂದಿರುವ ಪ್ರಕೃತಿ ವೈಭವವನ್ನು ವಿವರಿಸಿ.

**ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4x1=4**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶತಕ ಸಾಹಿತ್ಯ ವಿಶೇಷತೆಯಿಂದ ಕೂಡಿದ್ದು. ಈ ಪ್ರಕಾರದಲ್ಲಿ ಕೃತಿ ರಚನೆ ಮಾಡಿರುವ ಕವಿ ಸೋಮೇಶ್ವರ. ಇತನ ಕೃತಿ ಸೋಮೇಶ್ವರ ಶತಕವೆಂದೇ ಪ್ರಸಿದ್ಧಿಪಡೆದಿದೆ. ಸೋಮೇಶ್ವರ ಶತಕವು ಕನ್ನಡ ನಾಡಿನ ಜನಪದ ಕಾವ್ಯವೆಂಬಂತೆ ಜನರ ಮನಸ್ಸಿನಲ್ಲಿ ನೆಲೆಯಾಗಿರುವ ಕಾವ್ಯವಾಗಿದೆ. ನೀತಿ ಬೋಧಕವಾದ ಈ ಕಾವ್ಯವು ಇಂದಿಗೂ ಅನುಕರಣೀಯವಾದುದ್ದಾಗಿದೆ. "ಮಾತೃ ದೇವೋಭವ ಪಿತೃ ದೇವೋಭವ ಆಚಾರ್ಯದೇವೋಭವ" ಎಂಬುದು ನಮ್ಮೆಲ್ಲ ಧರ್ಮಗಳ ಮೂಲ ಮಂತ್ರ, ರಾಜನಾಗಲಿ, ಮಂತ್ರಿಯಾಗಲಿ, ರಕ್ಷಕರಾದ ಭಟರಾಗಲಿ ಇದರಿಂದ ಹೊರತಾಗುವುದಿಲ್ಲ.ದೈವದ ಅನುಗ್ರಹವು ಸ್ವಾಭಾವಿಕವಾಗಿ ಇಂತಹ ನೆಲೆಯಲ್ಲಿ ನಿಂತಿರುತದ್ತೆ.



Scanned with OKEN Scanner

1. ಕನ್ನಡ ನಾಡಿನ ಜನಪದ ಕಾವ್ಯವೆಂಬಂತೆ ಜನಮನದಲ್ಲಿ ನೆಲೆಸಿರುವ ಕಾವ್ಯ ಯಾವುದು? ಈ ಕಾವ್ಯದ ನಿರ್ಮಾತೃ ಯಾರು?
2. ಯಾರು ಯಾರು ತಮ್ಮ ಕರ್ತವ್ಯದಿಂದ ಹೊರತಾಗಿಲ್ಲ?

**ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ 'ರಮೇಶ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚಾರಿಸಿದ 'ಗಣರಾಜ್ಯೋತ್ಸವ'ದ ಕಾರ್ಯಕ್ರಮದ ಕುರಿತು ವರದಿ ಪ್ರಕಟಿಸುವಂತೆ ದಿನಪತ್ರಿಕೆಯ ಸಂಪಾದಕರಿಗೆ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಧಾರಾವಾಡದ ಸರ್ವೋದಯ ಶಾಲೆಯ 'ವಿನೂತ 'ಎಂದು ಭಾವಿಸಿಕೊಂಡು ಪರೀಕ್ಷಾ ತಯಾರಿ ಕುರಿತು ಹಾವೇರಿಯಲ್ಲಿ ವಾಸವಾಗಿರುವ ನಿಮ್ಮ ತಂದೆಗೆ ಪತ್ರ ಬರೆಯಿರಿ.

**ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 5x1=5**

45. ಸಾಮಾಜಿಕ ಪಿಡುಗುಗಳು

**ಅಥವಾ**

ಶಿಕ್ಷಣದಲ್ಲಿ ಅಂತರ್ಜಾಲದ ಮಹತ್ವ



Scanned with OKEN Scanner

## 10ನೇ ತರಗತಿ – ಪ್ರಥಮ ಭಾಷೆ – ಕನ್ನಡ
## ಮಾದರಿ ಪ್ರಶ್ನೆ ಪತ್ರಿಕೆ–5

**ಸಮಯ : 3.15ಗಂ.** **ಅಂಕಗಳು : 100**

**ಬಹು ಆಯ್ಕೆ ಪ್ರಶ್ನೆಗಳು** **6x1=6**

1. 'ಙ್, ಞ್, ಣ್,ನ್, ಮ್' ಅಕ್ಷರಗಳು ವರ್ಣಮಾಲೆಯ ಈ ವಿಧಕ್ಕೆ ಸೇರಿವೆ

ಎ) ಅಲ್ಪಪ್ರಾಣ ಬಿ) ಮಹಾಪ್ರಾಣ ಸಿ) ಅನುನಾಸಿಕಗಳು ಡಿ) ಸ್ವರಗಳು

2. ಕಾವ್ಯವನ್ನು ವಾಚಿಸುವಾಗ ಅರ್ಥಕ್ಕೆ ಲೋಪಬಾರದಂತೆ ನಿಲ್ಲಿಸುವ ಸ್ಥಳವನ್ನು ಹೀಗೆನ್ನುವರು

ಎ) ಗಣ ಬಿ) ಪ್ರಾಸ ಸಿ) ಮಾತ್ರೆ ಡಿ) ಯತಿ

3. ಚಿನ್ನವಿಲ್ಲದೆ ಬದುಕಬಹುದು, ಅನ್ನವಿಲ್ಲದೆ ಬದುಕಲಾದೀತೆ – ಈ ವಾಕ್ಯದ ಕೊನೆಯಲ್ಲಿ ಬಳಸಬೇಕಾದ ಲೇಖನ ಚಿಹ್ನೆ

ಎ) ಉದ್ಧರಣ ಬಿ) ಪ್ರಶ್ನಾರ್ಥಕ ಸಿ) ಆವರಣ ಡಿ) ವಿವರಣ

4. 'ಕಪ್ಪು' ಪದವು ಉದಾಹರಣೆಯಾಗಿರುವ ವ್ಯಾಕರಣಾಂಶ

ಎ) ತದ್ಧಿತಾಂತವ್ಯಯ ಬಿ) ಕೃದಂತಭಾವನಾಮ ಸಿ) ತದ್ಧಿತಾಂತನಾಮ ಡಿ) ತದ್ಧಿತಾಂತಭಾವನಾಮ

5. 'ಅವನು ವಿದ್ಯೆಯಲ್ಲಿ ಬಲು ಜಾಣ'– ಇಲ್ಲಿರುವ ಸರ್ವನಾಮ ಪದ

ಎ) ವಿದ್ಯೆ ಬಿ) ಬಲು ಸಿ) ಅವನು ಡಿ) ಜಾಣ

6. 'ಸಮ್ಮನೆ' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ

ಎ) ಸಾಮಾನ್ಯಾವ್ಯಯ ಬಿ) ಕ್ರಿಯಾರ್ಥಕಾವ್ಯಯ ಸಿ) ಅವಧಾರಣಾರ್ಥಕಾವ್ಯಯ ಡಿ) ಸಂಬಂಧಾರ್ಥಕಾವ್ಯಯ

**ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂದದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂದೀ ಪದವನ್ನು ಬರೆಯಿರಿ;**
**4*1=4**

7. ಬರೆದಳು: ಭೂತಕಾಲ :: ಬರೆಯುವಳು : ..........
8. ಕುಠಾರ : ಕೊಡಲಿ :: ದ್ಯೂತ : ..........................
9. ಸಾಕ್ಷಿಮಾಡಿ: ಕ್ರಿಯಾಸಮಾಸ :: ಪಂಚಭೂತ : ....
10. ದೇವೇಂದ್ರ : ಅಂಕಿತನಾಮ :: ವೈದ್ಯ : .............

**ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7*1=7**

11. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
12. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?
13. ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು?
14. ದುಷ್ಟಬುದ್ಧಿಯ ತಂದೆಯ ಹೆಸರೇನು?
15. ಕಾಡುಮೇಡುಗಳ ಸ್ಥಿತಿ ಹೇಗಿದೆ?
16. 'ಹಸುರು' ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ?
17. ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ?

**ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10*2=20**

18. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.
19. ಪೊಯೆಟ್ ಕಾರ್ನರ್‌ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ?
20. ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾದಿಯಿದೆ ಎಂದುಕೊಳ್ಳಲು ಕಾರಣವೇನು?
21. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?
22. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?
23. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?
24. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?
25. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕವ್ತ ಾಗಿದೆ?
26. ಮುದ್ದಣ ಕವಿ ಗೋವಿಂದ ಪೈ ಅವರಿಗೆ ಏನೆಂದು ಸಲಹೆ ಕೊಟ್ಟರು?
27. ನಾರಾಯಣಗುರು ಧರ್ಮಪರಿಪಾಲನಾ ಯೋಗಂ ಸಂಘಟನೆಯ ಕೊಡುಗೆಗಳನ್ನು ತಿಳಿಸಿ.

**ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪಲ್ಲಿ ಬರೆಯಿರಿ. 2*3=6**

28. ವಿದ್ಯಾವಾಚಸ್ಪತಿ ಡಾ.ಬನ್ನಂಜೆ ಗೋವಿಂದಾಚಾರ್ಯ
29. ಕುಮಾರವ್ಯಾಸ.



Scanned with OKEN Scanner

**ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ,ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1*3=3**

30. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ।
ನೊರ್ವನೇ ವೀರನಾತನ ಯಜ್ಞ ತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥

**ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ.** **1*3=3**

31. "ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ".

**ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1*3=3**

32. "ಮನಸ್ಸಿದ್ದರೆ ಮಾರ್ಗ".

**ಅಥವಾ**

"ಕೂಡಿಬಾಳಿದರೆ ಸ್ವರ್ಗಸುಖ"

**ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6*3=18**

33. "ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ! ಮಣ್ಣು! ಮಣ್ಣು!"
34. "ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು".
35. "ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ?"
36. "ಹೊಡೆದರೊ ಗುಂಡ ಕರುಣ ಇಲ್ಲದ್ಹ ಗ".
37. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್".
38. "ಜಾನಕಿಯ ಮಗನಿದಕೆ ಬೆದರುವನೆ".

**ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1*4=4**

**39**. ಅಂತೆಂಬನಾರ್ಗೆ. . . . . . . ನುಡಿದಂ

**ಅಥವಾ**

ಒಡವೆಯನರ್ಥಿಗಿತ್ತೆ . . . . . . . ಕುಂಭಸಂಭವ.

**ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.** **1*4=4**

40. ಯುಗ-ಯುಗಗಳ ಹಣಿ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

**ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2*4=8**

41. ಗುರೂಪದೇಶವನ್ನು ಯಾರ್ಯಾರು ಹೇಗೆ ಸ್ವೀಕರಿಸುತ್ತಾರೆ?

**ಅಥವಾ**

ಸಂಪತ್ತಿನ ಮದವೇರಿದ ಅರಸರ ಸ್ವಭಾವ ಹೇಗಿರುತ್ತದೆ?

42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ?

**ಅಥವಾ**

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

**ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1*4=4(2+2)**

43. ನೇತಾಜಿ ಸುಭಾಷ್‌ಚಂದ್ರ ಬೋಸ್‌ರು ಹೊರದೇಶಗಳಲ್ಲಿ ದೊಡ್ಡ ಸೈನ್ಯ ಕಟ್ಟಿ ಧೈರ್ಯ, ಸಾಹಸ, ದಿಟ್ಟತನದಿಂದ ಬ್ರಿಟಿಷರ ವಿರುದ್ಧ ಹೋರಾಡಿದರು. "ಗುಲಾಮರಂತೆ ನೂರು ವರ್ಷ ಬದುಕುವುದಕ್ಕಿಂತ ಸ್ವತಂತ್ರ ಜೀವಿಗಳಾಗಿ ಒಂದು ವರ್ಷ ಬದುಕುವುದೇ ಲೇಸು, ದೇಶ ಪ್ರೇಮಿಗಳೇ ನನಗೆ ನಿಮ್ಮ ಶಕ್ತಿ ಕೊಡಿ. ನಾನು ನಿಮಗೆ ಸ್ವತಂತ್ರ ಭಾರತವನ್ನು ನೀಡುತ್ತೇನೆ. ಸ್ವಾತಂತ್ರ್ಯ ಬೇಡಿ ಪಡೆಯುವ ವಸ್ತುವಲ್ಲ, ರಕ್ತ ಹರಿಸಿ ಬಲಿದಾನ ಮಾಡಿ ಪಡೆಯುವ ವಸ್ತು". ಎಂದು ಮೊದಲಾಗಿ ಹೇಳಿ ಹುರುದುಂಬಿಸುತ್ತಾ "ಜೈಹಿಂದ್". ಘೋಷಣೆ ಹುಟ್ಟು ಹಾಕಿ ಹೆಜ್ಜೆ ಹೆಜ್ಜೆಗೂ ಗಂಡಾಂತರಗಳನ್ನು ಎದುರಿಸುತ್ತಾ ಮುಂದೆ ಸಾಗಿದರು. ಬರ್ಮಾ ಭಾಗದಲ್ಲಿ ಯುದ್ಧ ಸಾಗುತಿತ್ತು. ಬ್ರಿಟಿಷರ ಕುಟಿಲೋಪಾಯಗಳಿಂದಾಗಿ ಐ.ಎನ್.ಎ. ಸೈನ್ಯಕ್ಕೆ ಆಹಾರ ಪದಾರ್ಥಗಳ ಅಭಾವವುಂಟಾಯಿತು.



Scanned with OKEN Scanner

ಯುದ್ಧೋಪಕರಣಗಳು ಸಾಲದೇ ಹೋದವು. ಅತ್ತ ಜಪಾನ್, ಜರ್ಮನಿ, ಇಟಲಿ ಸೋಲನುಭವಿಸಲು ಆರಂಭವಾಯಿತು. 1945ನೇ ಆಗಸ್ಟ್ 18ರಂದು ಯುದ್ಧೋಪಕರಣಗಳನ್ನು ತರಲು ರಾಜತಾಂತ್ರಿಕ ಕೆಲಸಕ್ಕಾಗಿ ವಿಮಾನದಲ್ಲಿ ಹೊರಟ ಸುಭಾಷ್‌ಚಂದ್ರ ಅಪಘಾತದಲ್ಲಿ ವಿಧಿವಶರಾದರು.

ಪ್ರಶ್ನೆಗಳು: : ಅ) ಸುಭಾಷ್‌ಚಂದ್ರ ಬೋಸ್‌ರು ಭಾರತೀಯ ಯುವಕರಿಗೆ ಏನಂದು ಕರೆ ನೀಡಿದರು?

ಆ) ಐ.ಎನ್.ಎ. ಸೈನ್ಯದ ಸೋಲಿಗೆ ಕಾರಣವೇನು?

**ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5**

44. ನಿಮ್ಮನ್ನು ಉಡುಪಿ ಸರ್ಕಾರಿ ಪ್ರೌಢಶಾಲೆಯ 'ವೇದ' ಎಂದು ಭಾವಿಸಿಕೊಂಡು 'ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ' ಬ್ಯಾಂಕಿನ ವ್ಯವಸ್ಥಾಪಕರಿಗೆ ನಿಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದು ಕೊಡುವಂತೆ ಕೋರಿ ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಕೋಲಾರದ ಜ್ಞಾನಜ್ಯೋತಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಸಂಕಲ್ಪ' ಎಂದು ಭಾವಿಸಿ ನಿಮ್ಮ ಪರೀಕ್ಷಾ ಸಿದ್ಧತೆಯನ್ನು ಕುರಿತು ನಿಮ್ಮ ಸ್ನೇಹಿತನಿಗೊಂದು ಪತ್ರ ಬರೆಯಿರಿ.

**ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1*5=5**

45. ಸಾಮಾಜಿಕ ಜಾಲತಾಣಗಳ ಸದ್ಬಳಕೆ

**ಅಥವಾ**

ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ



Scanned with OKEN Scanner